## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್,ಸಿ,ನಂ,56/2022

ಫಿರ್ಯಾದಿದಾರಃ ಸರ್ಕಾರ –ಮುಂಡರಗಿ ಪೊಲೀಸ ಠಾಣೆ

-ವಿರುದ್ಧ-

ಆರೋಪಿಃ ವಿಷ್ಣು ತಂದೆ ರೂಪಲೆಪ್ಪ ಪವಾರ,
ವಯಾಃ 43 ವರ್ಷ, ಉಃ ಒಕ್ಕಲುತನ,
ಸಾಃ ಅತ್ತಿಕಟ್ಟಿ, ತಾಃ ಮುಂಡರಗಿ, ಜಿಃ ಗದಗ.

***

### ದಂಡಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ

ಪ್ರಶ್ನೆ **1 -** ಈ ನ್ಯಾಯಾಲಯದಲ್ಲಿ ವಿಚಾರಣೆಯಾದ ಸಾಕ್ಷಿದಾರರು ನೀಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

ಪ್ರಶ್ನೆ **2 – ಫ್ರಾಸಾ-1** ಶಾರವ್ವ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ, ತನಗೆ ಚಾಸಾ-10 ರಿಂದ 13, 15 ರವರ ತಮ್ಮ ಊರಿನವರು ಇರುತ್ತಾರೆ, ಚಾಸಾ-14 ತಮ್ಮ ಸಂಬಂಧಿಕರು ಇರುತ್ತಾರೆ, ಚಾಸಾ-16 ಮತ್ತು 17 ರವರು ತನ್ನ ಮೈದುನರು ಇರುತ್ತಾರೆ, ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿ ತಮ್ಮ ತಾಂಡಾದವರು ಇರುತ್ತಾರೆ ಮತ್ತು ಆತನೇ ತನ್ನ ಗಂಡನನ್ನು ಸಾಯಿಸಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **3 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಅತ್ತಿಕಟ್ಟಿ ಗ್ರಾಮದ ತಮ್ಮ ಮನೆಯಲ್ಲಿ ತಾನು, ತನ್ನ ಗಂಡ, ತನ್ನ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳು ಕೂಡಿ ಇರುತ್ತಿದ್ದೆವು, ತನ್ನ ಗಂಡನು ಹೊಲ ಮನೆ ಕೆಲಸ ಮಾಡಿಕೊಂಡು ಇರುತ್ತಿದ್ದನು ಮತ್ತು ಆತನು ತಮ್ಮ ತಾಂಡಾದ ನಾಯಕನಾಗಿ ಕೆಲಸ ಮಾಡುತ್ತಿದ್ದನು, ಆರೋಪಿಗೆ ಮದುವೆಯಾಗಿದ್ದು, ಆತನಿಗೆ ಮಕ್ಕಳು ಇರುತ್ತಾರೆ, ಆರೋಪಿಯ ಹೆಂಡತಿಯು ಮನೆಗೆಲಸ ಮಾಡಿಕೊಂಡು ಇರುತ್ತಿದ್ದಳು, ಆರೋಪಿಯು ತನ್ನ ಹೆಂಡತಿಗೆ ಹೊಡೆ ಬಡೆ ಮಾಡಿದ್ದರಿಂದ, ಆಕೆಯು ತನ್ನ ಗಂಡನ ಮನೆಯನ್ನು ಬಿಟ್ಟು, ತನ್ನ ತವರು ಮನೆಯಾದ ಚಂದಾಪುರ ಗ್ರಾಮದಲ್ಲಿಯೇ ಇದ್ದಳು, ಈ ಕಾರಣಕ್ಕಾಗಿ, ಆರೋಪಿಯು ತನ್ನ ಗಂಡನಿಗೆ ತನ್ನ ಬಾಳ್ವೆ ಸರಿ ಮಾಡು ಎಂದು ಹೇಳುತ್ತಿದ್ದನು, ಅದಕ್ಕೆ ತನ್ನ ಗಂಡನು, ಊರು ಹಿರಿಯರು ಸೇರಿ ಸರಿ ಮಾಡುತ್ತೇವೆ ಎಂದು ಹೇಳಿದ್ದನು, ಈ ಕಾರಣಕ್ಕಾಗಿ ಆರೋಪಿಯು ತನ್ನ ಗಂಡನ ಮೇಲೆ ದ್ವೇಷ ಸಾಧಿಸುತ್ತಿದ್ದನು ಎಂದು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **4 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 04.03.2022 ರಂದು, ರಾತ್ರಿ 08,00 ಗಂಟೆ ಸುಮಾರಿಗೆ, ತನ್ನ ಗಂಡನು ತಮ್ಮ ಮನೆಯಿಂದ ಸೇವಾ ಲಾಲ ದೇವಸ್ಥಾನದ ಉದ್ಘಾಟನೆ ವಿಷಯವಾಗಿ ಮಾತನಾಡಲು ಹಿರಿಯರು ಸೇರಿರುತ್ತಾರೆ ಎಂದು ಹೇಳಿ ಹೋಗಿರುತ್ತಾನೆ, ತಮ್ಮ ಮನೆಯಿಂದ ಸದರಿ ಸೇವಾಲಾಲ ದೇವಸ್ಥಾನವು 100 ಅಡಿ ದೂರದಲ್ಲಿ ಇರುತ್ತದೆ, ಹಾಗೆ ತನ್ನ ಗಂಡನು ಹೋದ ಸ್ವಲ್ಪ ಹೊತ್ತಿನ ನಂತರ, ಚಾಸಾ-14 ರವರು ತಮ್ಮ ಮನೆಗೆ ಬಂದು, ಸೇವಾಲಾಲ ಗುಡಿಯಲ್ಲಿ ತನ್ನ ಗಂಡನಿಗೆ ಆರೋಪಿ ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ಹೇಳಿರುತ್ತಾನೆ, ಆಗ ತಾನು ಮತ್ತು ಚಾಸಾ-14 ರವರು ಸದರಿ ಸೇವಾಲಾಲ ದೇವಸ್ಥಾನಕ್ಕೆ ಓಡಿ ಹೋಗಿರುತ್ತೇವೆ, ಆಗ ಸದರಿ ದೇವಸ್ಥಾನದಲ್ಲಿ ತನ್ನ ಗಂಡನು ಡಬ್ಬಾಗಿ ಬಿದ್ದಿದ್ದನು ಮತ್ತು ರಕ್ತ ಚೆಲ್ಲಾಡಿತ್ತು, ತಾನು ತನ್ನ ಗಂಡನನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಆತನನ್ನು ನೋಡಲಾಗಿ, ಆತನ ಬಟ್ಟೆಗೆಲ್ಲಾ ರಕ್ತವಾಗಿತ್ತು ಮತ್ತು ಅತನು ಮಾತನಾಡಲಿಲ್ಲ ಮತ್ತು ಆತನ ಹೊಟ್ಟೆಗೆ, ಹೊಕ್ಕಳಕ್ಕೆ, ಗದ್ದಕ್ಕೆ, ಮೊಣಕೈಗೆ, ಎದೆಗೆ, ಹೊಟ್ಟೆಗೆ, ಎಡಗೈಗೆ ಚಾಕುವಿನಿಂದ ಚುಚ್ಚಿದ ಗಾಯಗಳಾಗಿದ್ದವು ಎಂದು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **5 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಅಲ್ಲಿ ತಮ್ಮ ತಾಂಡಾದ ಹಿರಿಯರಾದ ಚಾಸಾ-10, 11, 13, 12 ಸಹ ಇದ್ದರು, ಆಗ ತಾನು ಚಾಸಾ-10 ರವರಿಗೆ ತನ್ನ ಗಂಡನಿಗೆ ಹೀಗೇಕಾಯಿತು ಎಂದು ಕೇಳಿರುತ್ತೇನೆ, ಆಗ ಚಾಸಾ-10 ರವರು, ನಾವೆಲ್ಲಾ 5 ಜನರಾದ ತಾನು, 11, 13, 12 ಹಾಗೂ ಮೃತನು ಸೇರಿ ದೇವಸ್ಥಾನದ ಉದ್ಘಾಟನೆ ಬಗ್ಗೆ ಮಾತನಾಡುತ್ತಿದ್ದಾಗ, ಆರೋಪಿ ಅಲ್ಲಿಗೆ ಬಂದು, ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ತನ್ನ ಗಂಡನಿಗೆ ಭೋಸಡಿ ಮಗನೆ ತನ್ನ ಬಾಳ್ವೆ ಸರಿ ಪಡಿಸಿಲ್ಲ, ಗುಡಿ ಬಗ್ಗೆ ಮಾತಾಡಾಕತ್ತೀಯಾ ಎಂದು ಬೈದಾಡಿರುತ್ತಾನೆ, ಆಗ ನಾವೆಲ್ಲಾ ಆರೋಪಿಗೆ ಹೀಗೇಕೆ ಬೈದಾಡುತ್ತೀಯಾ ಎಂದು ಕೇಳಿರುತ್ತೇವೆ, ಆಗ ಆರೋಪಿಯು ಸದರಿ ದೇವಸ್ಥಾನದ ಕಂಬಕ್ಕೆ ಕುಳಿತುಕೊಂಡಿದ್ದ ತನ್ನ ಗಂಡನ ಎದೆಗೆ ಜೋರಾಗಿ ಒದ್ದಿರುತ್ತಾನೆ, ಆಗ ನಾವೆಲ್ಲಾ ಆರೋಪಿಗೆ ಹೀಗೇಕೆ ಮಾಡುತ್ತೀಯಾ ಎಂದು ಕೇಳಿದಾಗ, ಆರೋಪಿಯು ಚಾಕುವಿನಿಂದ ತನ್ನ ಗಂಡನ ಹೊಟ್ಟೆಗೆ, ಹೊಕ್ಕಳಕ್ಕೆ, ಗದ್ದಕ್ಕೆ, ಮೊಣಕೈಗೆ, ಎದೆಗೆ, ಹೊಟ್ಟೆಗೆ, ಎಡಗೈಗೆ ಚುಚ್ಚಿರುತ್ತಾನೆ ಮತ್ತು ತಾವು ಆರೋಪಿಯನ್ನು ಹಿಡಿದುಕೊಳ್ಳುವಷ್ಟರಲ್ಲಿ ಆತ ಓಡಿ ಹೋಗಿರುತ್ತಾನೆ ಎಂದು ಹೇಳಿರುತ್ತಾರೆ, ಆರೋಪಿ ತನ್ನ ಗಂಡನಿಗೆ ಚಾಕುವಿನಿಂದ ಚುಚ್ಚಿದಾಗ, ಸಮಯ ರಾತ್ರಿ 08,30 ಗಂಟೆಯಾಗಿತ್ತು ಎಂದು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **6 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ, ತಾನು, ಚಾಸಾ-14, ಚಾಸಾ-9 ರವರು ಸೇರಿ ತನ್ನ ಗಂಡನನ್ನು ಒಂದು ಖಾಸಗಿ ವಾಹನದಲ್ಲಿ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ, ಆಗ ವೈದ್ಯರು ತನ್ನ ಗಂಡನನ್ನು ಪರೀಕ್ಷೆ ಮಾಡಿ, ಆತ ಮೃತಪಟ್ಟಿರುತ್ತಾನೆ ಎಂದು ಹೇಳಿರುತ್ತಾರೆ, ಆಗ ಸಮಯ, ರಾತ್ರಿ 09,40 ಗಂಟೆಯಾಗಿತ್ತು, ಈ ಬಗ್ಗೆ ತಾನು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ, ದೂರನ್ನು ತಾನು ಹೇಳಿದಂತೆ, ಚಾಸಾ-13 ರವರು ಬರೆದಿರುತ್ತಾರೆ, ದೂರಿನ ಮೇಲೆ ತನ್ನ ಹೆಬ್ಬಟ್ಟಿನ ಗುರುತು ಇರುತ್ತದೆ, ಸದರಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು,

ತಾನು ದೂರನ್ನು ಕೊಟ್ಟಾಗ, ಸಮಯ ಮಧ್ಯ ರಾತ್ರಿ 01,30 ಗಂಟೆಯಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **7 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಯು ತನ್ನ ಗಂಡನಿಗೆ ಚಾಕುವಿನಿಂದ ಚುಚ್ಚಿದ ನಂತರ ಸದರಿ ಚಾಕುವನ್ನು ತಾನೇ ತೆಗೆದುಕೊಂಡು ಓಡಿ ಹೋಗಿರುತ್ತಾನೆ, ಆರೋಪಿ ಆ ದಿನ ಇನ್ನೊಂದು ಚಾಕುವನ್ನು ತನ್ನ ಸೊಂಟದಲ್ಲಿ ಇಟ್ಟುಕೊಂಡಿದ್ದು, ಅದನ್ನು ಚಾಸಾ-13 ರವರು ಆರೋಪಿಯಿಂದ ಕಸಿದುಕೊಂಡು ಪೋಲೀಸರಿಗೆ ಕೊಟ್ಟಿರುತ್ತಾರೆ, ಸದರಿ ಚಾಕುವನ್ನು ಚಾಸಾ-13 ರವರು ಪೋಲೀಸರಿಗೆ ಕೊಡುವುದನ್ನು ತಾನು ನೋಡಿರುತ್ತೇನೆ, ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ, ಕಬ್ಬಿಣದ ಅಲಗು ಇರುವ ಚೂಪಾದ ಚೂರಿಯನ್ನು ಮು.ಮಾ.1 ಎಂದು ಗುರುತಿಸಲಾಯಿತು, ಮು.ಮಾ.1 ಕ್ಕೆ ಚೂರಿ ಎಂದು ಕೂಡಾ ಕರೆಯುತ್ತಾರೆ, ಈ ಬಗ್ಗೆ ಪೋಲೀಸರು ತನ್ನನ್ನು ವಿಚಾರಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **8 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಘಟನೆ ದಿನ ತನ್ನ ಗಂಡನು ಬನಿಯನ, ಲುಂಗಿ ಮತ್ತು ಚಡ್ಡಿಯನ್ನು ಧರಿಸಿದ್ದನು ಮತ್ತು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ, ಅಲ್ಲಲ್ಲಿ ರಕ್ತ ಹತ್ತಿದ ಒಂದು ಕತ್ತರಿಸಿ ತೆಗೆದ ಫುಲ್ ತೋಳಿನ ಬನಿಯನನ್ನು ಮು.ಮಾ.2 ಎಂದು, ಅಲ್ಲಲ್ಲಿ ರಕ್ತ ಹತ್ತಿದ ಒಂದು ಪಟ್ಟಾಪಟ್ಟಿಯ (ಗೀರು ಗೀರಿನ) ಚಡ್ಡಿಯನ್ನು ಮು.ಮಾ.3 ಎಂದು ಮತ್ತು ಅಲ್ಲಲ್ಲಿ ರಕ್ತ ಹತ್ತಿದ ಒಂದು ಬಿಳಿ ಬಣ್ಣದ ಲುಂಗಿಯನ್ನು ಮು.ಮಾ.4 ಎಂದು ಗುರುತಿಸಲಾಯಿತು ಹಾಗೂ ಅವುಗಳು ತನ್ನ ಗಂಡನದು ಎಂದು ಗುರುತಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **9 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಫೋಟೋದಲ್ಲಿ ಸದರಿ ಸೇವಾಲಾಲ ದೇವಸ್ಥಾನದ ಭಾವಚಿತ್ರ ಇರುತ್ತದೆ, ಸದರಿ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು, ಫೋಟೋದಲ್ಲಿ ಆರೋಪಿಯು ತನ್ನ ಗಂಡನಿಗೆ ಚೂರಿ ಚುಚ್ಚಿದ ಸ್ಥಳದ ಭಾವಚಿತ್ರ ಇರುತ್ತದೆ, ಸದರಿ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು, ತನ್ನ ಗಂಡನ ಸಾವಿಗೆ ಆರೋಪಿಯೇ ಕಾರಣನಾಗಿರುತ್ತಾನೆ, ಆರೋಪಿಯು ತನ್ನ ಗಂಡನಿಗೆ ತನ್ನ ಬಾಳ್ವೆ ಸರಿ ಮಾಡದೇ, ಬೇರೆಯವರ ಕಾರ್ಯಕ್ರಮಗಳಿಗೆ ಯಾಕೆ ಹೋಗುತ್ತೀ ಎಂದು ಅವಾಚ್ಯವಾಗಿ ಬೈದಾಡುತ್ತಿದ್ದನು, ಆರೋಪಿಯು ಚೂರಿಯಿಂದ ತನ್ನ ಗಂಡನಿಗೆ ಚುಚ್ಚಿ ಕೊಲೆ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **10 –** ಪ್ರಾಸಾ**-2** ಹಾಲಪ್ಪ ಚವ್ಹಾಣ ಇವರು ತಮ್ಮ ಸಾಕ್ಷಿಯಲ್ಲಿ, ಗುನ್ನಾ ಜಾಗೆ ಪಂಚನಾಮೆಯ ಮೇಲೆ ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-4 ಎಂದು, ತನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು, ಈಗ ಸುಮಾರು 2 ವರ್ಷಗಳ ಹಿಂದೆ, ಮುಂಡರಗಿ ಪೋಲೀಸರು ತಮ್ಮ ಊರಿನ ಸೇವಾಲಾಲ ದೇವಸ್ಥಾನಕ್ಕೆ

ಬಂದಾಗ, ಅಲ್ಲಿ ತನ್ನ ಸಹಿಯನ್ನು ನಿಪಿ-4 ಕ್ಕೆ ಪಡೆದುಕೊಂಡಿರುತ್ತಾರೆ, ಸದರಿ ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರ ಕೊಲೆಯಾಗಿತ್ತು, ಸದರಿ ಸೋಮಲೆಪ್ಪ ಇವರನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಲಾಗಿತ್ತು, ಕೊಲೆಯಾದ ಸ್ಥಳವನ್ನು ಚಾಸಾ-16 ರವರು ತೋರಿಸಿರುತ್ತಾರೆ, ಸ್ಥಳದಲ್ಲಿ ರಕ್ತ ಬಿದ್ದು, ಒಣಗಿತ್ತು, ಅಲ್ಲಿ ಪೋಲೀಸರು ಒಣಗಿದ ರಕ್ತವನ್ನು ಕೆದರಿ ಡಬ್ಬಿಯಲ್ಲಿ ಹಾಕಿಕೊಂಡಿರುತ್ತಾರೆ, ಸದರಿ ಸ್ಥಳದಲ್ಲಿ ನಿಪಿ-4 ಕ್ಕೆ ತನ್ನ ಸಹಿ ಪಡೆದುಕೊಂಡಿರುತ್ತಾರೆ, ನಿಪಿ-4 ನ್ನು ಪೋಲೀಸ ಠಾಣೆಯಲ್ಲಿ ಬರೆದಿರುತ್ತಾರೆ, ಪಂಚನಾಮೆಯನ್ನು ಸದರಿ ಸೇವಾಲಾಲ ದೇವಸ್ಥಾನದಲ್ಲಿ ಬರೆದಿರುತ್ತಾರೆ, ಪಂಚನಾಮೆಯನ್ನು ಬೆಳಗಿನ ಸಮಯದಲ್ಲಿ ಒಂದು ತಾಸಿನವರೆಗೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **11 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ, ಸದರಿ ಫೋಟೋಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿರುತ್ತದೆ, ನಿಪಿ-2 ಮತ್ತು 3 ರಲ್ಲಿ ಕ್ರಮ ಸಂಖ್ಯೆ: 4 ರಲ್ಲಿ ತನ್ನ ಭಾವಚಿತ್ರ ಇರುತ್ತದೆ, ನಿಪಿ-3 ದೇವಸ್ಥಾನದಲ್ಲಿರುವ ಕಂಬದ ಫೋಟೋವಾಗಿದ್ದು, ಅಲ್ಲಿ ರಕ್ತ ಬಿದ್ದಿದ್ದ ಗುನ್ಹಾ ಸ್ಥಳವಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **12 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಪೋಲೀಸರು ವಶಪಡಿಸಿಕೊಂಡ ಒಣಗಿದ ರಕ್ತವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದು ಆ ದಿನ ಪೋಲೀಸರು ಸಂಗ್ರಹಿಸಿದ ಒಣಗಿದ ರಕ್ತ ಇರಬಹುದು ಎಂದು ಹೇಳಿರುತ್ತಾರೆ, ಆದ್ದರಿಂದ ಸದರಿ ಒಣಗಿದ ರಕ್ತವನ್ನು ಮು.ಮಾ.5 ಎಂದು ಗುರುತಿಸಲಾಯಿತು, ಮು.ಮಾ.5 ರ ಕವರಿನ ಮೇಲೆ ಅಂಟಿಸಿರುವ ಚೀಟಿಯ ಮೇಲೆ ತನ್ನ ಸಹಿ ಇದ್ದು, ಅದನ್ನು ಮು.ಮಾ.5(ಎ) ಎಂದು ಗುರುತಿಸಲಾಯಿತು, ಆ ದಿನ ತನ್ನ ಜೊತೆ ಚಾಸಾ-3 ರವರೂ ಕೂಡಾ ಪಂಚರಾಗಿ ಇದ್ದರು, ಚಾಸಾ-3 ರವರೂ ಕೂಡಾ ಮು.ಮಾ.5 ರ ಕವರಿನ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಹಿ ಮಾಡಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **13 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಪಂಚನಾಮೆಯ ಪೂರ್ವದಲ್ಲಿ, ಪೋಲೀಸರು ತನಗೆ ನೋಟೀಸನ್ನು ಕೊಟ್ಟಿದ್ದರು, ಸದರಿ ನೋಟೀಸಿಗೆ ತಾನು ಸಹಿ ಮಾಡಿದ್ದೆನು, ನೋಟೀಸ ಮೇಲೆ ತನ್ನ ಸಹಿ ಇರುತ್ತದೆ, ಸದರಿ ನೋಟೀಸನ್ನು ನಿಪಿ-5 ಎಂದು, ತನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು ಹಾಗೂ ಆ ದಿನ ಪೋಲೀಸರು ಗುನ್ಹಾ ಸ್ಥಳದಿಂದ ಒಣಗಿದ ರಕ್ತವನ್ನು ಹತ್ತಿಯಿಂದ ತೆಗೆದು, ಜಿಪ್ ಇರುವ ಪ್ಲಾಸ್ಟಿಕ ಪಾಕೀಟಿನಲ್ಲಿ ಸಂಗ್ರಹಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **14 –** ಫ್ರಾಸಾ**-3** ಶೇಖಪ್ಪ ಪವಾರ ಇವರು ತಮ್ಮ ಸಾಕ್ಷಿಯಲ್ಲಿ, ಶವ ಪಂಚನಾಮೆಯ ಮೇಲೆ ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-6 ಎಂದು ತನ್ನ ಸಹಿಯನ್ನು

ನಿಪಿ-6(ಎ) ಎಂದು ಗುರುತಿಸಲಾಯಿತು, ಈಗ ಸುಮಾರು 2 ವರ್ಷಗಳ ಹಿಂದೆ ಮುಂಡರಗಿ ಪೋಲೀಸರು ಮುಂಡರಗಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಸೋಮಲೆಪ್ಪ ನಾಯಕ್ ಈತನ ಶವ ಪಂಚನಾಮೆಯನ್ನು ಮಾಡಿರುತ್ತಾರೆ, ತನ್ನ ಜೊತೆಗೆ ಚಾಸಾ-4 ರವರು ಸಹ ಹಾಜರಿದ್ದರು, ಚಾಸಾ-17 ರವರು ಹಾಜರಿದ್ದು, ಸದರಿ ಶವವು ಮೃತ ಸೋಮಲೆಪ್ಪ ನಾಯಕ್ ಇವರ ಶವವಿರುತ್ತದೆ ಎಂದು ಹೇಳಿರುತ್ತಾರೆ, ತಾನು ಶವವನ್ನು ಪರಿಶೀಲಿಸಿದಾಗ, ಗದ್ದಕ್ಕೆ, ಹೊಟ್ಟೆಗೆ, ಎಡಗೈ ಹಾಗೂ ಎದೆಯ ಮೇಲೆ ಚಾಕುವಿನಿಂದ ತಿವಿದ ಗಾಯಗಳಾಗಿದ್ದವು, ಕುತ್ತಿಗೆಗೆ ತೀವ್ರ ತರಹವಾದ ಗಾಯವಾಗಿತ್ತು, ಅದರಿಂದ, ರಕ್ತ ಹೊರಗೆ ಬಂದಿತ್ತು, ಆ ರೀತಿಯಾಗಿ ಆರೋಪಿಯು ಚಾಕುವಿನಿಂದ ತಿವಿದು ಗಾಯಮಾಡಿರುತ್ತಾನೆ ಎಂದು ತನಗೆ ಗೊತ್ತಾಯಿತು, ಆಗ ಫೋಟೋಗಳನ್ನು ತೆಗೆಯಲಾಗಿರುತ್ತದೆ, ಸದರಿ ಫೋಟೋಗಳಲ್ಲಿ ತನ್ನ ಭಾವಚಿತ್ರ ಇರುತ್ತದೆ, ಸದರಿ ಫೋಟೋಗಳನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು, ನಿಪಿ-8 ರಲ್ಲಿ ತನ್ನ ಭಾವಚಿತ್ರವಿರುತ್ತದೆ ಹಾಗೂ ಶವ ಪಂಚನಾಮೆಯನ್ನು ಮಧ್ಯಾಹ್ನ 01,00 ಯಿಂದ 02,00 ಗಂಟೆಯವರೆಗೆ ಮಾಡಲಾಯಿತು, ಶವದ ಮೇಲೆ ಬಟ್ಟೆಗಳನ್ನು ಮು ಮಾ 2 ರಿಂದ 4 ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **15 –** ಫ್ರಾಸಾ-**4** ಅಲ್ಲಾಭಕ್ಷಿ ಸೊಟಕನಾಳ ಇವರು ತಮ್ಮ ಸಾಕ್ಷಿಯಲ್ಲಿ, ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಆರೋಪಿತನ ಸಂರಕ್ಷಣೆಗಾಗಿ ಇಟ್ಟುಕೊಂಡಿದ್ದ ಮಚ್ಚು ಜಪ್ತಿ ಪಂಚನಾಮೆಯ ಮೇಲೆ ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-9 ಎಂದು ತನ್ನ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-9(ಎ) ಎಂದು ಗುರುತಿಸಲಾಯಿತು, ಆರೋಪಿಯ ಮೈಮೇಲಿನ ಬಟ್ಟೆ ಜಪ್ತಿ ಪಂಚನಾಮೆಯ ಮೇಲೆ ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-10 ಎಂದು ತನ್ನ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು, ಮೃತನ ಮೈಮೇಲಿನ ಬಟ್ಟೆ ಜಪ್ತಿ ಪಂಚನಾಮೆಯ ಮೇಲೆ ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-11 ಎಂದು ತನ್ನ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **16 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಈಗ ಸುಮಾರು 2 ವರ್ಷಗಳ ಹಿಂದೆ ತಾನು ಮುಂಡರಗಿ ಪೊಲೀಸ್ ಠಾಣೆಗೆ ಹೋದಾಗ ತನ್ನನ್ನು ಪಂಚನಾಮೆಗೆ ಎಂದು ಕರೆಸಿರುತ್ತಾರೆ, ಹಾಗೆಯೇ, ಚಾಸಾ-7 ರವರನ್ನು ಪಂಚನಾಮೆಗೆ ಎಂದು ಕರೆಸಿರುತ್ತಾರೆ, ಅಲ್ಲಿ ನ್ಯಾಯಾಲಯದ ವಿಸಿಯಲ್ಲಿ ಕಾಣಿಸುವ ಆರೋಪಿಯು ಇದ್ದರು, ತಮ್ಮ ಸಮಕ್ಷಮ ಆರೋಪಿಯ ಹೆಸರನ್ನು ಪೊಲೀಸರು ಕೇಳಿದಾಗ, ಆತನು ತನ್ನ ಹೆಸರನ್ನು ವಿಷ್ಣು ಪವಾರ ಎಂದು ತನ್ನ ಮತ್ತು ತನ್ನ ಹೆಂಡತಿಯ ಜಗಳವಿದ್ದು, ತಾನು ಅತ್ತಿಕಟ್ಟಿ ತಾಂಡಾದ ನಾಯಕನಿಗೆ ಚಾಕುವಿನಿಂದ ಚುಚ್ಚಿ ಸಾಯಿಸಿರುವುದಾಗಿ ಮತ್ತು ಸದರಿ ಚಾಕುವನ್ನು ಮತ್ತು ಇನ್ನೊಂದು ಮಚ್ಚನ್ನು ಒಂದು ಕಡೆಗೆ ಮುಚ್ಚಿಟ್ಟಿರುವುದಾಗಿ ತನ್ನ ಜೊತೆಗೆ ಬಂದರೆ ತೋರಿಸುವುದಾಗಿ ಹೇಳಿರುತ್ತಾರೆ, ಆಗ ಆರೋಪಿಯು ರಕ್ತದ ಕಲೆ ಇರುವ ಫುಲ್ ತೋಳಿನ ಶರ್ಟನ್ನು ಮೃತನಿಗೆ ಚಾಕುವಿನಿಂದ ಚುಚ್ಚುವಾಗ ಧರಿಸಿದ್ದ ಶರ್ಟು ಎಂದು ಹೇಳಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **17 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆನಂತರ, ಸಂಜೆ 04,15 ಕ್ಕೆ ತಾನು, ಸಿಪಿಐ, ಪೊಲೀಸ್ ಸಿಬ್ಬಂದಿ, ಆರೋಪಿ ಹಾಗೂ ಚಾಸಾ-7 ರವರು ಸೇರಿ ಬರದೂರು ಸಮೀಪವಿರುವ ಒಂದು ಚಿಕ್ಕುತೋಟದ ಎದುರಿಗೆ ರಸ್ತೆಯ ಬದಿಯಲ್ಲಿ ಮುಳ್ಳಿನ ಕಂಟಿಯ ಕೆಳಗೆ ಬಚ್ಚಿಟ್ಟಿದ್ದ ಚಾಕು ಮತ್ತು ಮಚ್ಚನ್ನು ತೆಗೆದು ಹಾಜರುಪಡಿಸಿರುತ್ತಾನೆ, ಸದರಿ ಚಾಕು ಮತ್ತು ಮಚ್ಚನ್ನು ಆರೋಪಿಯು ತನ್ನ ಕೈಗೆ ಕೊಟ್ಟಿರುತ್ತಾನೆ, ನಂತರ, ಪೊಲೀಸರು ಜಪ್ತಿ ಮಾಡಿಕೊಂಡಿರುತ್ತಾರೆ, ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ, ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸೀಲು ಮಾಡಿದ ಪ್ಯಾಕನ್ನು ಬಿಚ್ಚಿ ಅದರಲ್ಲಿದ್ದ ಚಾಕುವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಗುರುತಿಸಿದ್ದು, ಸದರಿ ಚಾಕುವನ್ನು ಮು.ಮಾ.6 ಎಂದು ಗುರುತಿಸಲಾಯಿತು, ನಂತರ, ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸೀಲು ಮಾಡಿದ ಪ್ಯಾಕನ್ನು ಬಿಚ್ಚಿ ಅದರಲ್ಲಿದ್ದ ಮಚ್ಚನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಗುರುತಿಸಿದ್ದು, ಸದರಿ ಮಚ್ಚನ್ನು ಮು.ಮಾ.7 ಎಂದು ಗುರುತಿಸಲಾಯಿತು, ಮು,ಮಾ 7 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿ ಇರುತ್ತದೆ, ತನ್ನ ಸಹಿಯನ್ನು ಮು,ಮಾ-7(ಎ) ಎಂದು ಗುರುತಿಸಲಾಯಿತು, ಆ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ, ಸದರಿ ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿ ತನ್ನ ಭಾವಚಿತ್ರ ಇರುತ್ತದೆ ಎಂದು ಹೇಳಿರುತ್ತಾರೆ, ಸದರಿ ಫೋಟೋವನ್ನು ನಿಪಿ-12 ಎಂದು ಗುರುತಿಸಲಾಯಿತು, ನಿಪಿ-9 ನ್ನು ಸ್ಥಳದಲ್ಲಿಯೇ ಲಾಪಟಾಪ್ ಮೂಲಕ ತಯಾರಿಸಲಾಗಿದ್ದು, ತಾನು ಅದಕ್ಕೆ ಸ್ಥಳದಲ್ಲಿಯೇ ಸಹಿಗಳನ್ನು ಮಾಡಿರುತ್ತೇನೆ, ತನ್ನ ಜೊತೆಗೆ ಚಾಸಾ-7 ರವರು ಸಹ ನಿಪಿ-9 ಕ್ಕೆ ಸಹಿ ಮಾಡಿರುತ್ತಾರೆ, ಆಗ ಆರೋಪಿಯು ಕೂಡ ನಿಪಿ-9 ಕ್ಕೆ ಸಹಿ ಮಾಡಿರುತ್ತಾರೆ ಹಾಗೂ ಆರೋಪಿಯು ಕೊಟ್ಟಂತಹ ಮು.ಮಾ.6 ಮತ್ತು 7 ನ್ನು ತಾನು ಪೊಲೀಸರಿಗೆ ಕೊಟ್ಟಿರುತ್ತೇನೆ, ನಿಪಿ-9 ನ್ನು ಸಂಜೆ 04,30 – 05,30 ಗಂಟೆಯವರೆಗೆ ಮಾಡಲಾಗಿರುತ್ತದೆ, ನಂತರ, ತಾವೆಲ್ಲರೂ ಮುಂಡರಗಿ ಪೊಲೀಸ್ ಠಾಣೆಗೆ ವಾಪಾಸ್ ಬಂದಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **18 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಮುಂಡರಗಿ ಪೊಲೀಸ್ ಠಾಣೆಗೆ ವಾಪಾಸ್ ಬಂದ ನಂತರ, ಆರೋಪಿಯ ತಾನು ಕೊಲೆ ಮಾಡುವ ಸಮಯದಲ್ಲಿ ಹಾಕಿಕೊಂಡಿದ್ದ ಆಕಾಶ ನೀಲಿ ಬಣ್ಣದ ರಕ್ತ ಹತ್ತಿದ್ದ ಫುಲ್ ಶರ್ಟನ್ನು ಕಳಚಿ ತನ್ನ ಕೈಗೆ ಕೊಟ್ಟಿರುತ್ತಾನೆ ಮತ್ತು ತಾನು ಅದನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ, ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ, ಸದರಿ ಫೋಟೋಗಳನ್ನು ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು, ನಿಪಿ-13 ಫೋಟೋ ಆರೋಪಿಯು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಫುಲ್ ತೋಳಿನ ಶರ್ಟ ಆಗಿರುತ್ತದೆ, ನಿಪಿ-14 ಫೊಟೋ ಆರೋಪಿಯು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಫುಲ್ ತೋಳಿನ ಶರ್ಟನ್ನು ಬಿಚ್ಚಿ ಕೊಡುವ ಸಮಯದಲ್ಲಿ ತೆಗೆದ ಫೋಟೋ ಆಗಿರುತ್ತದೆ, ಆರೋಪಿಯು ಕಳಚಿ ಕೊಟ್ಟ ಒಂದು ತಿಳಿ ಆಕಾಶ ನೀಲಿ ಬಣ್ಣದ ಫುಲ್ ತೋಳಿನ ಶರ್ಟ ವಾಪರಿಸಿದ್ದು, ಅಲ್ಲಲ್ಲಿ ರಕ್ತದ ಕಲೆ ಇದ್ದದ್ದನ್ನು ಮು.ಮಾ.8 ಎಂದು ಗುರುತಿಸಲಾಯಿತು, ಮು.ಮಾ.8 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು

ಮು,ಮಾ-8(ಎ) ಎಂದು ಗುರುತಿಸಲಾಯಿತು, ಸದರಿ ಚೀಟಿಯ ಮೇಲೆ ಚಾಸಾ-7 ರವರು ಸಹ ತಮ್ಮ ಸಹಿಯನ್ನು ಮಾಡಿರುತ್ತಾರೆ, ಆರೋಪಿಯ ಮೈಮೇಲಿನ ಶರ್ಟನ್ನು ಜಪ್ತಿ ಮಾಡುವ ಪಂಚನಾಮೆಯನ್ನು ಸಂಜೆ 06,00 – 07,00 ವರೆಗೆ ಬರೆಯಲಾಗಿರುತ್ತದೆ ಮತ್ತು ಪಂಚನಾಮೆಯನ್ನು ಠಾಣೆಯಲ್ಲಿಯೇ ತಯಾರಿಸಲಾಗಿರುತ್ತದೆ, ತಾನು ಠಾಣೆಯಲ್ಲಿಯೇ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ, ತನ್ನ ಜೊತೆಗೆ ಚಾಸಾ-7 ರವರು ಸಹ ಸಹಿಯನ್ನು ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **19 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಿಪಿ-10 ರ ನಂತರ, ತಾನು ತನ್ನ ಅಂಗಡಿಗೆ ಹೋಗಿದ್ದು, ಪೊಲೀಸರು ತನಗೆ ಪುನಃ ಪೊಲೀಸ್ ಠಾಣೆಗೆ ಬರಬೇಕು ಎಂದು ತಿಳಿಸಿದ್ದರಿಂದ ತಾನು ಪೊಲೀಸ್ ಠಾಣೆಗೆ ಬಂದಿರುತ್ತೇನೆ, ಆಗ ಚಾಸಾ-7 ರವರು ಕೂಡ ಬಂದಿದ್ದರು, ಆಗ ಪೊಲೀಸ್ ಸಿಬ್ಬಂದಿಯವರು ಮೃತನ ಮೈಮೇಲಿನ ಬಟ್ಟೆಗಳಾದ ಒಂದು ಕತ್ತರಿಸಿ ತೆಗೆದ ಫುಲ್ ತೋಳಿನ ಬನಿಯನ್ ಅಲ್ಲಲ್ಲಿ ರಕ್ತ ಹತ್ತಿದ್ದು, ಒಂದು ಪಟ್ಟಾಪಟ್ಟಿ ಚಡ್ಡಿ ಅದರಲ್ಲಿ ಅಲ್ಲಲ್ಲಿ ರಕ್ತ ಹತ್ತಿದ್ದು ಮತ್ತು ಒಂದು ಬಿಳಿ ಬಣ್ಣದ ಲುಂಗಿ ಅಲ್ಲಲ್ಲಿ ರಕ್ತ ಹತ್ತಿದ್ದು ತಂದು ಚಾಸಾ-29 ಮತ್ತು ತಮ್ಮ ಮುಂದೆ ಹಾಜರುಪಡಿಸಿರುತ್ತಾರೆ, ಅವುಗಳನ್ನು ಒಂದೊಂದು ಕವರಿನಲ್ಲಿ ಪ್ರತ್ಯೇಕವಾಗಿ ಹಾಕಿ ಸೀಲ್ ಮಾಡಲಾಗಿರುತ್ತದೆ, ಸದರಿ ಬಟ್ಟೆಗಳನ್ನು ಮು,ಮಾ-2 ರಿಂದ 4 ಎಂದು ಗುರುತಿಸಲಾಗಿರುತ್ತದೆ, ಮು,ಮಾ-2 ರಿಂದ 4 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿಗಳು ಇರುತ್ತವೆ, ಅವುಗಳನ್ನು ಮು,ಮಾ-2(ಎ) ಮು,ಮಾ-3(ಎ) ಮತ್ತು ಮು,ಮಾ-4(ಎ) ಎಂದು ಗುರುತಿಸಲಾಯಿತು, ಮು,ಮಾ-2 ರಿಂದ 4 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ಚಾಸಾ-7 ರವರ ಸಹಿಗಳು ಸಹ ಇರುತ್ತವೆ, ನಿಪಿ-11 ನ್ನು ರಾತ್ರಿ 09,30 ರಿಂದ 10,30 ವರೆಗೆ ಮಾಡಲಾಗಿರುತ್ತದೆ, ನಿಪಿ-11 ನ್ನು ಠಾಣೆಯಲ್ಲಿಯೇ ಗಣಕೀಕರಣ ಮಾಡಲಾಗಿದ್ದು, ತಾನು ಮತ್ತು ಚಾಸಾ-7 ರವರು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **20 –** ಫ್ರಾಸಾ-**5** ರವಿ ಲಮಾಣಿ ಇವರು ತಮ್ಮ ಸಾಕ್ಷಿಯಲ್ಲಿ, ಫ್ರಾಸಾ-1 ಹಾಗೂ ಚಾಸಾ-8 ರವರು ತನಗೆ ಗೊತ್ತು, ಚಾಸಾ-10 ರಿಂದ 14 ರವರು ಗೊತ್ತು, ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿ ತನಗೆ ಗೊತ್ತು, ಮೃತ ಸೋಮಲೆಪ್ಪ ನಾಯಕ ತನಗೆ ಪರಿಚಯ ಇದ್ದರು, ಈಗ ಸುಮಾರು ಎರಡು ವರ್ಷಗಳ ಹಿಂದೆ, ರಾತ್ರಿ 08,30/09,00 ಗಂಟೆ ಸಮಯದಲ್ಲಿ ಚಾಸಾ-14 ರವರು ತನಗೆ, ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ಹೇಳಿ, ತನ್ನ ಬೋಲೇರೋ ವಾಹನವನ್ನು ತರುವಂತೆ ಹೇಳಿರುತ್ತಾರೆ, ನಂತರ ತಾನು ತನ್ನ ಬೋಲೇರೋ ವಾಹನವನ್ನು ತೆಗೆದುಕೊಂಡು ಸದರಿ ಸೇವಾಲಾಲ ದೇವಸ್ಥಾನದ ಮುಂದೆ ಇರುವ ರಸ್ತೆಗೆ ಹೋಗಿದ್ದು, ಅಲ್ಲಿ ಗಾಯಗೊಂಡ ಸದರಿ ಸೋಮಲೆಪ್ಪ ನಾಯಕ ಇವರನ್ನು ತಾನು, ಚಾಸಾ-14, ಫ್ರಾಸಾ-1 ರವರು ಸೇರಿ ತನ್ನ ಬೋಲೇರೋ ವಾಹನದಲ್ಲಿ ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **21 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಸದರಿ ಸೋಮಲೆಪ್ಪ ಇವರಿಗೆ ಆರೋಪಿ ಚಾಕುವಿನಿಂದ ಅವರ ದೇಹದ ಎಲ್ಲಾ ಕಡೆಗೆ ಚುಚ್ಚಿದ್ದನು ಮತ್ತು ಇದರಿಂದಾಗಿ ಅವರ ಬಟ್ಟೆಗೆಲ್ಲಾ ರಕ್ತವಾಗಿತ್ತು, ನಂತರ ಸದರಿ ಸೋಮಲೆಪ್ಪ ನಾಯಕ ಈತನು ಮೃತಪಟ್ಟಿರುತ್ತಾನೆ ಎಂದು ತನಗೆ ಗೊತ್ತಾಯಿತು, ಆರೋಪಿ ತನ್ನ ಹೆಂಡತಿಯ ಸಲುವಾಗಿ ಸದರಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ತನಗೆ ಗೊತ್ತಾಯಿತು, ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ಚುಚ್ಚುವಾಗ, ಚಾಸಾ-10, 12 ಮತ್ತು 13 ರವರು ಇದ್ದರು ಎಂದು ತನಗೆ ಗೊತ್ತಾಯಿತು, ಹಾಗೆಯೇ ಚಾಸಾ-13 ರವರು ಆರೋಪಿಯ ಹತ್ತಿರ ಇದ್ದ ಚೂರಿಯನ್ನು ಕಸಿದುಕೊಂಡಿರುತ್ತಾರೆ ಎಂದು ತನಗೆ ಗೊತ್ತಾಯಿತು, ಸುಮಾರು ಎರಡು ವರ್ಷಗಳ ಹಿಂದೆ ಪೋಲೀಸರು ಪಂಚನಾಮೆಗೆ ಬರಬೇಕೆಂದು ತನಗೆ ನೋಟೀಸನ್ನು ನೀಡಿದ್ದರು, ಸದರಿ ನೋಟೀಸನ್ನು ನಿಪಿ-15 ಎಂದು, ತನ್ನ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು, ಆ ಪ್ರಕಾರ ತಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **22 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಚಾಸಾ-13 ರವರು ಸದರಿ ಆರೋಪಿಯಿಂದ ಕಸಿದುಕೊಂಡ ಚೂರಿಯನ್ನು ಮುಂಡರಗಿ ಪೋಲೀಸ್ ಠಾಣೆಯಲ್ಲಿ ಹಾಜರಪಡಿಸುವಾಗ, ಪೋಲೀಸರು ತನ್ನ ಸಮಕ್ಷಮ ಪಂಚನಾಮೆ ಮಾಡಿ, ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ, ಆ ಸಮಯದಲ್ಲಿ ಚಾಸಾ-8 ರವರು ಕೂಡಾ ಹಾಜರ ಇದ್ದರು, ಸದರಿ ಪಂಚನಾಮೆಯನ್ನು ನಿಪಿ-16 ಎಂದು, ತನ್ನ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು, ತನ್ನ ಜೊತೆಗೆ ನಿಪಿ-16 ಕ್ಕೆ ಚಾಸಾ-8 ಮತ್ತು 13 ರವರು ಕೂಡಾ ಸಹಿಗಳನ್ನು ಮಾಡಿರುತ್ತಾರೆ, ನಿಪಿ-16 ನ್ನು ಮುಂಜಾನೆ 08,30 ರಿಂದ 09,00 ಗಂಟೆಯವರೆಗೆ ಮಾಡಲಾಗಿರುತ್ತದೆ, ನಿಪಿ-16 ನ್ನು ಮುಂಡರಗಿ ಪೋಲೀಸ ಠಾಣೆಯಲ್ಲಿ ತಯಾರಿಸಲಾಗಿರುತ್ತದೆ, ಆ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ, ಸದರಿ ಫೋಟೋವನ್ನು ನಿಪಿ-17 ಎಂದು ಗುರುತಿಸಲಾಯಿತು, ಸದರಿ ಚೂರಿಯನ್ನು ಮು.ಮಾ.1 ಎಂದು ಗುರುತಿಸಲಾಗಿರುತ್ತದೆ ಮತ್ತು ಈ ಬಗ್ಗೆ ತಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **23 –** ಫ್ರಾಸಾ-**6** ಶ್ರೀಹರಿ ನಗರ ಇವರು ತಮ್ಮ ಸಾಕ್ಷಿಯಲ್ಲಿ, ಮೃತ ಸೋಮಲೆಪ್ಪ ನಾಯಕ ತನ್ನ ತಾಯಿಯ ತಮ್ಮನಿರುತ್ತಾನೆ ಮತ್ತು ಆತ ತನಗೆ ಮಾವನಾಗಬೇಕು, ಫ್ರಾಸಾ-1 ರವರು ಮೃತ ಸೋಮಲೆಪ್ಪ ರವರ ಹೆಂಡತಿ ಇರುತ್ತಾಳೆ, ತನಗೆ ಚಾಸಾ-10 ರಿಂದ 13, ಫ್ರಾಸಾ-5, ಚಾಸಾ-16 ಮತ್ತು 17 ರವರು ಪರಿಚಯ ಇದ್ದು, ಅವರು ತಮ್ಮ ಊರಿನವರು ಇರುತ್ತಾರೆ, ಮೃತ ಸೋಮಲೆಪ್ಪ ನಾಯಕ ರವರು ಹತ್ತಿಕಟ್ಟಿ ಗ್ರಾಮದ ನಾಯಕರಾಗಿದ್ದರು, ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿ ತನಗೆ ಗೊತ್ತು, ಆರೋಪಿಗೆ ಮದುವೆಯಾಗಿದ್ದು, ಆತನಿಗೆ ಮಕ್ಕಳು ಇರುತ್ತಾರೆ, ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ, ಈ ಕಾರಣಕ್ಕಾಗಿ

ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರಿಗೆ ತನ್ನ ಸಂಸಾರವನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದರು, ಈ ಬಗ್ಗೆ ಮೃತ ಸೋಮಲೆಪ್ಪ ನಾಯಕ ಇವರು ಆರೋಪಿಗೆ ಮತ್ತು ಆರೋಪಿಯ ಹೆಂಡತಿಗೆ ಬುದ್ದಿ ಹೇಳಿದ್ದರು, ಆದರೂ ಕೂಡಾ ಆರೋಪಿಯು ಸುಧಾರಿಸಿರಲಿಲ್ಲ ಮತ್ತು ಆತನ ಸಂಸಾರ ಸರಿ ಹೋಗಿರಲಿಲ್ಲ, ತನ್ನ ಸಂಸಾರವನ್ನು ಸರಿ ಮಾಡಿರುವುದಿಲ್ಲ ಎಂದು ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರ ವಿರುದ್ಧ ದ್ವೇಷವನ್ನು ಸಾಧಿಸುತ್ತಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **24 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 04.03.2022 ರಂದು, ರಾತ್ರಿ 08,30 ಗಂಟೆಗೆ ಮೃತ ಸೋಮಲೆಪ್ಪ ನಾಯಕ, ಚಾಸಾ-11, 12, 13 ಹಾಗೂ ಚಾಸಾ-10 ರವರು ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದರು, ಆ ಸಮಯದಲ್ಲಿ ತಾನು ತಾವರೆಪ್ಪ ನಾಯಕ ಇವರ ಅಂಗಡಿ ಹತ್ತಿರ ಕುಳಿತುಕೊಂಡಿದ್ದಾಗ, ಹತ್ತಿಕಟ್ಟಿ ತಾಂಡಾದ ಸೇವಾಲಾಲ ದೇವಸ್ಥಾನದಲ್ಲಿ ಚೀರಾಡುವ ಶಬ್ದ ತನಗೆ ಕೇಳಿಸಿರುತ್ತದೆ, ಆಗ ತಾನು ಸದರಿ ಸೇವಾಲಾಲ ದೇವಸ್ಥಾನದ ಹತ್ತಿರ ಹೋದಾಗ, ಆರೋಪಿಯು ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ತಿವಿದಿರುತ್ತಾನೆ ಎಂದು ತನಗೆ ಗೊತ್ತಾಯಿತು, ತಕ್ಷಣ ತಾನು ಫ್ರಾಸಾ-1 ರವರ ಮನೆಗೆ ಹೋಗಿ, ಈ ವಿಷಯವನ್ನು ತಿಳಿಸಿ, ಫ್ರಾಸಾ-1 ರವರನ್ನು ಸೇವಾಲಾಲ ದೇವಸ್ಥಾನಕ್ಕೆ ಕರೆದುಕೊಂಡು ಬಂದು, ಸೋಮಲೆಪ್ಪ ನಾಯಕ ಇವರನ್ನು ನೋಡಿದಾಗ, ಆತನ ಕುತ್ತಿಗೆ, ಗದ್ದ, ಹೊಟ್ಟೆ, ಹೊಕ್ಕಳದ ಹತ್ತಿರ ಮತ್ತು ಕೈಗೆ ಚಾಕುವಿನಿಂದ ಚುಚ್ಚಿದ ರಕ್ತ ಗಾಯಗಳಾಗಿದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **25 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಅಲ್ಲೇ ಇದ್ದ ಚಾಸಾ-10 ರವರಿಗೆ ತಾವು ವಿಚಾರಿಸಿದಾಗ, ಚಾಸಾ-10 ರವರು ತಾನು, ಮೃತ ಸೋಮಲೆಪ್ಪ, ಚಾಸಾ-11, 12, 13 ರವರು ದೇವಸ್ಥಾನದ ಉದ್ಘಾಟನೆ ಬಗ್ಗೆ ಮಾತನಾಡುತ್ತಾ ಕುಳಿತುಕೊಂಡಿದ್ದಾಗ, ಆರೋಪಿಯು ಅಲ್ಲಿಗೆ ಬಂದು, ಸೋಮಲೆಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈದು, ಇಲ್ಲಿ ಕುಳಿತು ಏನು ಮಾಡುತ್ತೀ, ತನ್ನ ಸಂಸಾರವನ್ನು ಸರಿ ಮಾಡು ಬಾ ಎಂದು ಹೇಳಿ, ಕಾಲಿನಿಂದ ಸೋಮಲೆಪ್ಪನಿಗೆ ಒದ್ದು, ಚಾಕುವಿನಿಂದ ಸೋಮಲೆಪ್ಪನ ಕುತ್ತಿಗೆಗೆ, ಗದ್ದಕ್ಕೆ, ಹೊಟ್ಟೆಗೆ, ಹೊಕ್ಕಳದ ಹತ್ತಿರ ಮತ್ತು ಕೈಗೆ ಚುಚ್ಚಿರುತ್ತಾನೆ ಮತ್ತು ಆರೋಪಿಯ ಹತ್ತಿರ ಇದ್ದ ಇನ್ನೊಂದು ಚೂರಿಯನ್ನು ಚಾಸಾ-13 ರವರು ಕಸಿದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **26 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಮೃತ ಸೋಮಲೆಪ್ಪ ನಾಯಕ ಈತನು ದೇವಸ್ಥಾನದ ಒಳಗೆ ಒಂದು ಕಂಬದ ಹತ್ತಿರ ಕುಳಿತುಕೊಂಡಿದ್ದು, ಅಲ್ಲಿ ರಕ್ತ ಹರಿದಿತ್ತು, ನಂತರ ತಾನು, ಫ್ರಾಸಾ-1 ರವರು ಸೇರಿ ಫ್ರಾಸಾ-5 ರವರ ಬೊಲೇರೋ ವಾಹನದಲ್ಲಿ ಮೃತ ಸೋಮಲೆಪ್ಪನನ್ನು ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇವೆ, ಆಗ ವೈದ್ಯರು ಸದರಿ ಸೋಮಲೆಪ್ಪನನ್ನು ಪರೀಕ್ಷೆ ಮಾಡಿ, ಆತನು

ಮೃತಪಟ್ಟಿರುತಾತನೆ ಎಂದು ಹೇಳಿರುತ್ತಾರೆ, ಆಗ ಸಮಯ ರಾತ್ರಿ 09,45 ಗಂಟೆಯಾಗಿತ್ತು, ಈ ಬಗ್ಗೆ ಪ್ರಾಸಾ-1 ರವರು ಆರೋಪಿಯ ವಿರುದ್ಧ ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ, ನಿಪಿ-2 ರಲ್ಲಿ ಕಾಣಿಸುವ ದೇವಸ್ಥಾನವು ಹತ್ತಿಕಟ್ಟಿ ಗ್ರಾಮದಲ್ಲಿರುವ ಸೇವಾಲಾಲ ದೇವಸ್ಥಾನ ಆಗಿರುತ್ತದೆ, ನಿಪಿ-3 ರಲ್ಲಿ ಕಾಣಿಸುವ ರಕ್ತ ಹರಿದಿರುವ ಕಂಬದ ಹತ್ತಿರವೇ ಸದರಿ ಮೃತ ಸೋಮಲೆಪ್ಪ ನಾಯಕ ಈತನು ಕುಳಿತುಕೊಂಡಿದ್ದನು, ಮೃತ ಸೋಮಲೆಪ್ಪನನ್ನು ಆರೋಪಿಯೇ ತನ್ನ ಸಂಸಾರವನ್ನು ಸರಿ ಮಾಡಿಲ್ಲ ಎಂದು ಹೇಳಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾನೆ, ಈ ಬಗ್ಗೆ ತಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **27 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಾನು ಚೀರಾಡಿದ ಶಬ್ದ ಕೇಳಿ ಸ್ಥಳಕ್ಕೆ ಹೋದಾಗ, ಮೃತ ಸೋಮಲೆಪ್ಪ ಕೆಳಗಡೆ ಬಿದ್ದಿದ್ದನು, ಸ್ಥಳದಲ್ಲಿ ಪ್ರಾಸಾ-10, 11, ಚಾಸಾ-11 ಮತ್ತು 12 ರವರು ಇದ್ದರು, ಮೃತ ಸೋಮಲೆಪ್ಪನಿಗೆ ಚುಚ್ಚಿರುವುದನ್ನು ತಾನು ಬೆಳಕಿನಲ್ಲಿ ನೋಡಿರುತ್ತೇನೆ, ಯಾರು ಚುಚ್ಚಿದರು ಎಂದು ತಾನು ನೋಡಿರುವುದಿಲ್ಲ, ಗರ್ಭಗುಡಿಯ ಒಳಗಡೆ ಲೈಟಿನ ಬೆಳಕು ಇತ್ತು, ಹೊರಗಡೆ ಕೂಡಾ ಲೈಟಿನ ಬೆಳಕು ಇತ್ತು, ಮೃತ ವ್ಯಕ್ತಿ ಬಿದ್ದಿದ್ದ ಸ್ಥಳದ ಮೇಲೆ ಲೈಟ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **28 –** ಪ್ರಾಸಾ-**7** ಸುರೇಶ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ, ಪ್ರಾಸಾ-1 ರವರು ತನ್ನ ಅತ್ತಿಗೆ ಇರುತ್ತಾರೆ, ಮೃತ ಸೋಮಲೆಪ್ಪ ನಾಯಕ ತನ್ನ ಅಣ್ಣನಿದ್ದನು, ಪ್ರಾಸಾ-1 ರವರು ಮೃತ ಸೋಮಲೆಪ್ಪ ರವರ ಹೆಂಡತಿ ಇರುತ್ತಾರೆ, ಪ್ರಾಸಾ-5, ಚಾಸಾ-10 ರಿಂದ 13 ರವರು ತನಗೆ ಪರಿಚಯ ಇರುತ್ತಾರೆ, ಪ್ರಾಸಾ-6 ತನ್ನ ಅಕ್ಕನ ಮಗ ಇರುತ್ತಾನೆ, ಚಾಸಾ-16 ತನ್ನ ಅಣ್ಣನಿರುತ್ತಾನೆ, ಮೃತ ಸೋಮಲೆಪ್ಪ ನಾಯಕ ರವರು ಹತ್ತಿಕಟ್ಟಿ ಗ್ರಾಮದ ನಾಯಕರಾಗಿದ್ದು ಅವರು ಕುಟುಂಬ ಸಮೇತ ಅಲ್ಲಿ ವಾಸವಾಗಿದ್ದರು, ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿ ತನಗೆ ಗೊತ್ತು, ಆರೋಪಿ ಕೂಡಾ ಹತ್ತಿಕಟ್ಟಿ ಗ್ರಾಮದವರಾಗಿರುತ್ತಾರೆ, ಆರೋಪಿಗೆ 18 -19 ವರ್ಷಗಳ ಹಿಂದೆ ಮದುವೆಯಾಗಿರುತ್ತದೆ, ಆರೋಪಿಗೆ 5 ಜನ ಮಕ್ಕಳು ಇರುತ್ತಾರೆ, ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ, ಆತನ ಹೆಂಡತಿಯು ಆರೋಪಿಯೊಂದಿಗೆ ವೈಮನಸ್ಸು ಮಾಡಿಕೊಂಡು ತನ್ನ ತವರು ಮನೆಯಾದ ಚಂದಾಪುರ ಗ್ರಾಮಕ್ಕೆ ಹೋಗಿ ವಾಸ ಮಾಡಿಕೊಂಡಿದ್ದಳು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **29 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಯು ಮೃತ ಸೋಮಲೆಪ್ಪ ನಾಯಕ ಹಾಗೂ ಚಾಸಾ-10 ರಿಂದ 13 ರವರಿಗೆ ತನ್ನ ಸಂಸಾರವನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದರು, ಈ ಬಗ್ಗೆ ಮೃತ ಸೋಮಲೆಪ್ಪ ನಾಯಕ ಹಾಗೂ ಚಾಸಾ-10 ರಿಂದ 13 ರವರು ಆರೋಪಿಗೆ ಮತ್ತು ಆರೋಪಿಯ ಹೆಂಡತಿಗೆ ಬುದ್ದಿ ಹೇಳಿದ್ದರು, ಆದರೂ ಕೂಡಾ ಆತನ ಸಂಸಾರ ಸರಿ ಹೋಗಿರಲಿಲ್ಲ, ತನ್ನ ಸಂಸಾರವನ್ನು

ಸರಿ ಮಾಡಿರುವುದಿಲ್ಲ ಎಂದು ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರ ವಿರುದ್ಧ ದ್ವೇಷವನ್ನು ಸಾಧಿಸುತ್ತಿದ್ದನು, ದಿಃ 04.03.2022 ರಂದು, ರಾತ್ರಿ 08,30 ಗಂಟೆಗೆ ಮೃತ ಸೋಮಲೆಪ್ಪ ನಾಯಕ, ಚಾಸಾ-11, 12, 13 ಹಾಗೂ ಚಾಸಾ-10 ರವರು ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದರು, ಆ ಸಮಯದಲ್ಲಿ ಆರೋಪಿಯು ಅಲ್ಲಿಗೆ ಬಂದು ಮೃತ ಸೋಮಲೆಪ್ಪ ಇವರಿಗೆ ಚಪ್ಪಲಿಯನ್ನು ತೋರಿಸಿ, ತನ್ನ ಸಂಸಾರವನ್ನು ಸರಿ ಮಾಡು ಎಂದು ಹೇಳಿದರೆ, ನೀನು ಇಲ್ಲಿ ಬಂದು ಕುಳಿತಿದ್ದೀಯಾ ಎಂದು, ಕಾಲಿನಿಂದ ಒದ್ದು, ಚಾಕುವಿನಿಂದ ಅವರ ಕುತ್ತಿಗೆಗೆ, ಗದ್ದಕ್ಕೆ, ಹೊಕ್ಕಳಕ್ಕೆ, ಕೈಗೆ ಚುಚ್ಚಿ ಗಾಯಪಡಿಸಿರುತ್ತಾನೆ, ಈ ಬಗ್ಗೆ ರಾತ್ರಿ 09,30 ಗಂಟೆ ಸುಮಾರಿಗೆ ತಮ್ಮ ಮನೆಯಿಂದ ತನಗೆ ಫೋನ ಮಾಡಿ ಆರೋಪಿ ಚಾಕು ಚುಚ್ಚಿದ ಬಗ್ಗೆ ತಿಳಿಸಿ, ಮೃತ ಸೋಮಲೆಪ್ಪ ಇವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **30 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆಗ ತಾನು ನೇರವಾಗಿ ಗದಗ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇನೆ, ಮೃತ ಸೋಮಲೆಪ್ಪ ಇವರನ್ನು ಫ್ರಾಸಾ-5 ರವರ ಬೋಲೇರೋ ವಾಹನದಲ್ಲಿ ಫ್ರಾಸಾ-1 ಮತ್ತು 6 ರವರು ಕರೆದುಕೊಂಡು ಬಂದಿದ್ದರು, ತಾನು ತನ್ನ ಅಣ್ಣನನ್ನು ನೋಡಿದಾಗ, ಆತನು ಮೃತಪಟ್ಟಿದ್ದನು, ಆತನಿಗೆ ಕುತ್ತಿಗೆಗೆ, ಗದ್ದಕ್ಕೆ, ಹೊಕ್ಕಳಕ್ಕೆ ಮತ್ತು ಕೈಗೆ ರಕ್ತ ಗಾಯಗಳಾಗಿದ್ದವು ಮತ್ತು ಆತನ ಬಟ್ಟೆಗೆಲ್ಲಾ ರಕ್ತವಾಗಿತ್ತು, ವೈದ್ಯರು ರಾತ್ರಿ 09,45 ಗಂಟೆಗೆ ಮೃತ ಸೋಮಲೆಪ್ಪನನ್ನು ಪರೀಕ್ಷೆ ಮಾಡಿ, ಆತನು ಮೃತಪಟ್ಟಿರುವುದಾಗಿ ಹೇಳಿರುತ್ತಾರೆ, ಈ ವಿಷಯದ ಬಗ್ಗೆ ತಾನು ಫ್ರಾಸಾ-1 ಮತ್ತು 6 ರವರನ್ನು ಕೇಳಿರುತ್ತೇನೆ, ದಿನಾಂಕಃ 05.03.2022 ರಂದು, ಮದ್ಯಾಹ್ನ 01,00 ರಿಂದ 02,00 ರ ಸಮಯದಲ್ಲಿ ತನ್ನ, ಚಾಸಾ-4 ಮತ್ತು ಫ್ರಾಸಾ-3 ರವರ ಸಮಕ್ಷಮ ಮೃತ ಸೋಮಲೆಪ್ಪನ ಶವದ ಪಂಚನಾಮೆಯನ್ನು ಗದಗ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮಾಡಲಾಗಿರುತ್ತದೆ, ಮೃತ ಸೋಮಲೆಪ್ಪನ ಶವವನ್ನು ತಾನು ಗುರುತಿಸಿರುತ್ತೇನೆ, ಆ ಸಮಯದಲ್ಲಿ ನಿಪಿ-8 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ, ನಿಪಿ-8 ರ ಕ್ರಮ ಸಂಖ್ಯೆಃ 4 ರಲ್ಲಿ ತನ್ನ ಭಾವಚಿತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **31 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಮೃತ ಸೋಮಲೆಪ್ಪನ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಲಾಗಿರುತ್ತದೆ, ಪರೀಕ್ಷೆಯ ನಂತರ ಶವವನ್ನು ತನ್ನ ತಾಬಾಕ್ಕೆ ಕೊಡಲಾಗಿರುತ್ತದೆ, ಶವವನ್ನು ತೆಗೆದುಕೊಂಡ ಬಗ್ಗೆ ತಾನು ಪಾವತಿ ಬೇಸ್ಮಿಯನ್ನು ಬರೆದುಕೊಟ್ಟಿರುತ್ತೇನೆ, ಸದರಿ ಪಾವತಿ ಬೇಸ್ಮಿಯನ್ನು ನಿಪಿ-18 ಎಂದು, ತನ್ನ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು, ಈ ಬಗ್ಗೆ ಫ್ರಾಸಾ-1 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ, ಮೃತ ಸೋಮಲೆಪ್ಪನ ಬಟ್ಟೆಗಳನ್ನು 2 ರಿಂದ 4 ಎಂದು ಗುರುತಿಸಲಾಗಿರುತ್ತದೆ, ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **32 –** ಫ್ರಾಸಾ-**8** ಪರಮೇಶ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ, ಮೃತ ಸೋಮಲೆಪ್ಪ ನಾಯಕ ತನ್ನ ಅಣ್ಣನಿದ್ದನು, ಫ್ರಾಸಾ-1 ರವರು ಸದರಿ ಸೋಮಲೆಪ್ಪ ನಾಯಕನ ಹೆಂಡತಿ ಇರುತ್ತಾಳೆ, ತನಗೆ ಫ್ರಾಸಾ-5, ಚಾಸಾ-10 ರಿಂದ 13 ರವರು ತನಗೆ ಪರಿಚಯ ಇರುತ್ತಾರೆ, ಫ್ರಾಸಾ-10 ರವರು ತನ್ನ ಅಕ್ಕನ ಮಗನಿರುತ್ತಾನೆ, ಫ್ರಾಸಾ-7 ರವರು ತನ್ನ ತಮ್ಮ ಇರುತ್ತಾರೆ, ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿ ತನಗೆ ಪರಿಚಯ ಇರುತ್ತಾನೆ, ಆರೋಪಿ ತನ್ನ ಅಣ್ಣನಾದ ಸೋಮಲೆಪ್ಪ ನಾಯಕನನ್ನು ಕೊಲೆ ಮಾಡಿರುತ್ತಾನೆ, ಸದರಿ ಸೋಮಲೆಪ್ಪ ನಾಯಕ ಇವರು ಹತ್ತಿಕಟ್ಟಿ ತಾಂಡಾದಲ್ಲಿ ನ್ಯಾಯ ಬಗೆಹರಿಸುವ ಕೆಲಸವನ್ನು ಮಾಡುತ್ತಿದ್ದರು, ಆರೋಪಿಗೆ ಮದುವೆಯಾಗಿ ಮಕ್ಕಳು ಇರುತ್ತಾರೆ, ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ, ಆತನ ಹೆಂಡತಿಯು ಆರೋಪಿಯೊಂದಿಗೆ ವೈಮನಸ್ಸು ಮಾಡಿಕೊಂಡು ತನ್ನ ತವರು ಮನೆಗೆ ಹೋಗಿ ವಾಸ ಮಾಡಿಕೊಂಡಿದ್ದಳು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **33 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿಕೊಡು ಎಂದು ಮೃತ ಸೋಮಲೆಪ್ಪ ನಾಯಕ ಇವರನ್ನು ಕೇಳುತ್ತಿದ್ದರು, ಆಗ ಹಿರಿಯರು ಎಲ್ಲರೂ ಸೇರಿ ಆರೋಪಿಯ ಸಂಸಾರವನ್ನು ಸರಿ ಮಾಡಲು ಪ್ರಯತ್ನಪಟ್ಟಿದ್ದರು, ಆದರೂ ಕೂಡಾ ಆತನ ಸಂಸಾರ ಸರಿ ಹೋಗಿರಲಿಲ್ಲ, ಆದ್ದರಿಂದ ಆರೋಪಿಯು ಸದರಿ ಸೋಮಲೆಪ್ಪ ನಾಯಕ ಇವರ ಮೇಲೆ ಸಿಟ್ಟು ಇಟ್ಟುಕೊಂಡಿದ್ದನು, ಈಗ ಸುಮಾರು ಎರಡು ವರ್ಷಗಳ ಹಿಂದೆ, ಒಂದು ದಿನ ತಾನು ಗೋವಾದಲ್ಲಿದ್ದಾಗ, ರಾತ್ರಿ 10,00 ಗಂಟೆ ಸಮಾರಿಗೆ ತಮ್ಮ ಮನೆಯವರು ತನಗೆ ಫೋನ ಮಾಡಿ, ಸೋಮಲೆಪ್ಪ ನಾಯಕ ಇವರನ್ನು ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಕೊಲೆ ಮಾಡಿರುತ್ತಾನೆ ಮತ್ತು ಶವ ಗದಗನ ಜಿಲ್ಲಾ ಆಸ್ಪತ್ರೆಯಲ್ಲಿ ಇರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **34 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ವಿಷಯ ತಿಳಿದು ತಾನು ಗೋವಾದಿಂದ ನೇರವಾಗಿ ಹತ್ತಿಕಟ್ಟಿ ಗ್ರಾಮಕ್ಕೆ ಬಂದಿರುತ್ತೇನೆ, ಆಗ ತಮ್ಮ ಮನೆಯ ಹತ್ತಿರ ಜನರು ಸೇರಿದ್ದರು, ತಾನು ಸದರಿ ಸೇವಾಲಾಲ ದೇವಸ್ಥಾನಕ್ಕೆ ಹೋಗಿ ನೋಡಿದಾಗ, ಸದರಿ ದೇವಸ್ಥಾನದ ಕಂಬದ ಹತ್ತಿರ ರಕ್ತ ಆಗಿತ್ತು, ಆಗ ತಾನು ಅಲ್ಲೇ ಇದ್ದ ಚಾಸಾ-10 ರವರನ್ನು ವಿಚಾರಿಸಿದಾಗ, ಚಾಸಾ-10 ರವರು ತಾನು, ಚಾಸಾ-11, 12, 13 ಮತ್ತು ಮೃತ ಸೋಮಲೆಪ್ಪ ನಾಯಕ ಸೇರಿ ಸದರಿ ಸೇವಾಲಾಲ ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದಾಗಿ, ಆ ಸಮಯದಲ್ಲಿ ಆರೋಪಿಯು ಅಲ್ಲಿಗೆ ಬಂದು, ಮೃತ ಸೋಮಲೆಪ್ಪನಿಗೆ ತನ್ನ ಸಂಸಾರವನ್ನು ಸರಿ ಮಾಡು ಎಂದು ಹೇಳಿದರೆ, ತನ್ನ ಸಂಸಾರವನ್ನು ಸರಿ ಮಾಡಲು ಆಗಲಿಲ್ಲ, ದೇವಸ್ಥಾನದ ಕೆಲಸವನ್ನು ಏನು ಮಾಡುತ್ತೀ ಎಂದು ಹೇಳಿ, ಚಾಕುವಿನಿಂದ ಆತನ ಕುತ್ತಿಗೆಗೆ, ಹೊಕ್ಕಳಕ್ಕೆ, ಕೈಗೆ ಮತ್ತು ಮರ್ಮಾಂಗಕ್ಕೆ ಚುಚ್ಚಿ ಗಾಯಪಡಿಸಿರುತ್ತಾನೆ ಮತ್ತು ಆರೋಪಿ ಹತ್ತಿರ ಇದ್ದ ಇನ್ನೊಂದು ಚೂರಿಯನ್ನು ಚಾಸಾ-13 ರವರು ಕಸಿದುಕೊಂಡಿರುತ್ತಾರೆ ಮತ್ತು ಈ ಎಲ್ಲಾ ಘಟನೆಯಾದಾಗ ಸಮಯ ರಾತ್ರಿ 08,30 ಗಂಟೆ ಆಗಿತ್ತು ಎಂದು

ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **35 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಫ್ರಾಸಾ-1, 5 ರವರು ಸೇರಿ ಫ್ರಾಸಾ-5 ರವರ ಬೋಲೇರೋ ವಾಹನದಲ್ಲಿ ಸೋಮಲೆಪ್ಪ ನಾಯಕನನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಅಲ್ಲಿ ವೈದ್ಯರು ಪರೀಕ್ಷೆ ಮಾಡಿ, ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾನೆ ಎಂದು ಹೇಳಿರುತ್ತಾರೆ, ಈ ಘಟನೆಯ ಬಗ್ಗೆ ಫ್ರಾಸಾ-1 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ, ದೂರನ್ನು ಕೊಟ್ಟ ನಂತರ ಪೋಲೀಸರು ಸೋಮಲೆಪ್ಪ ನಾಯಕ ಮೃತಪಟ್ಟ ಮಾರನೇ ದಿನ ಸದರಿ ಸೇವಾಲಾಲ ದೇವಸ್ಥಾನಕ್ಕೆ ಬಂದಿದ್ದು, ಆಗ ಪೋಲೀಸರಿಗೆ ಸ್ಥಳವನ್ನು ತಾನು ತೋರಿಸಿರುತ್ತೇನೆ, ಸದರಿ ಸ್ಥಳದಲ್ಲಿ ಪೋಲೀಸರು ಸ್ಥಳವನ್ನು ಪರಿಶೀಲನೆ ಮಾಡಿ, ಪಂಚರಾದ ಫ್ರಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ, ಆ ಕಾಲಕ್ಕೆ ನಿಪಿ-2 ಮತ್ತು 3 ರಂತೆ ಫೋಟೋಗಳನ್ನು ತೆಗೆಯಲಾಗಿರುತ್ತದೆ, ನಿಪಿ-2 ಮತ್ತು 3 ರಲ್ಲಿ ಕ್ರಮ ಸಂಖ್ಯೆ 2 ರಲ್ಲಿ ತನ್ನ ಭಾವಚಿತ್ರಗಳು ಇರುತ್ತದೆ, ಈಗ ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿರುತ್ತದೆ, ನಿಪಿ-4 ಕ್ಕೆ ಪೋಲೀಸರು ತನ್ನ ಹೆಬ್ಬೆಟ್ಟಿನ ಗುರುತನ್ನು ಮಾಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **36 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಪೋಲೀಸರು ಅರಳಿಯಿಂದ ತೆಗೆದು, ಪಾಕೀಟಿನಲ್ಲಿ ಹಾಕಿ ಕೊಂಡಿರುತ್ತಾರೆ, ಸದರಿ ಪೋಲೀಸರು ತೆಗೆದುಕೊಂಡಿರುವ ರಕ್ತವನ್ನು ನೋಡಿದರೆ ಗುರುತಿಸುತ್ತೇನೆ, ಈಗ ಸದರಿ ರಕ್ತವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಗಿರುತ್ತದೆ, ಪೋಲೀಸರು ಸ್ಥಳಕ್ಕೆ ಬಂದಾಗ, ಸಮಯ ಬೆಳಿಗ್ಗೆ 10,00 ಗಂಟೆಯ ಮೇಲೆ ಆಗಿತ್ತು ಮತ್ತು ಪೋಲೀಸರು ಅಲ್ಲಿ 2 – 3 ತಾಸುಗಳ ವರೆಗೆ ಇದ್ದರು, ಸದರಿ ಅವಧಿಯಲ್ಲಿ ನಿಪಿ-4 ಪಂಚನಾಮೆಯನ್ನು ಮಾಡಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **37 –** ಫ್ರಾಸಾ-**9** ಅವಿನಾಶಸಿಂಗ ಬ್ಯಾಳಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 05.03.2022 ರಂದು ಚಾಸಾ-29 ರವರು ತನಗೆ ಮೃತ ಸೋಮಲೆಪ್ಪ ನಾಯಕ ಇವರ ಶವದ ಮರಣೋತ್ತರ ಪರೀಕ್ಷೆ ಮಾಡಿಸಬೇಕೆಂದು ಆದೇಶವನ್ನು ಮಾಡಿದ್ದರು, ಆ ಪ್ರಕಾರ ತಾನು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿ ಅಲ್ಲಿದ್ದ ಮೃತ ಸೋಮಲೆಪ್ಪ ನಾಯಕ ಇವರ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿಸಿ, ಶವವನ್ನು ಅದರ ವಾರಸುದಾರರಿಗೆ ಕೊಟ್ಟು ಅವರಿಂದ ಪಾವತಿ ಚೇಸ್ಮಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **38 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ವೈದ್ಯರು ಮರಣೋತ್ತರ ಕಾಲಕ್ಕೆ ಕಾಯ್ದಿರಿಸಿದ ಶವದ ಮೈಮೇಲಿನ ರಕ್ತ ಹತ್ತಿದ ಬಟ್ಟೆಗಳಾದ ಬನಿಯನ, ಲುಂಗಿ ಹಾಗೂ ಚಡ್ಡಿಯನ್ನು ಕೊಟ್ಟಿದ್ದು, ಅವುಗಳನ್ನು ತಂದು ಚಾಸಾ-29 ರವರ ಮುಂದೆ

ಹಾಜರಪಡಿಸಿರುತ್ತೇನೆ, ಚಾಸಾ-29 ರವರು ಸದರಿ ಬಟ್ಟೆಗಳನ್ನು ಪಂಚರಾದ ಚಾಸಾ-7 ಮತ್ತು ಫ್ರಾಸಾ-4 ರವರ ಸಮಕ್ಷಮ ರಾತ್ರಿ 09,00 ಗಂಟೆಯಿಂದ ಒಂದು ತಾಸಿನ ವರೆಗೆ ಪಂಚನಾಮೆ ಮಾಡಿ ಆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತಾರೆ, ಸದರಿ ಪಂಚನಾಮೆಯನ್ನು ನಿಪಿ-11 ಎಂದು ಮತ್ತು ತನ್ನ ಸಹಿಯನ್ನು ನಿಪಿ-11(ಬಿ) ಎಂದು ಹಾಗೂ ಸದರಿ ಬಟ್ಟೆಗಳನ್ನು ಮು.ಮಾ. 2 ರಿಂದ 4 ಎಂದು ಗುರುತಿಸಲಾಗಿರುತ್ತದೆ ಮತ್ತು ಈ ಬಗ್ಗೆ ತಾನು ಚಾಸಾ-29 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **39 –** ಫ್ರಾಸಾ-**10** ಮಹಾಂತೇಶ ಚವಾಣ ಇವರು ತಮ್ಮ ಸಾಕ್ಷಿಯಲ್ಲಿ, ಫ್ರಾಸಾ-1 ಮತ್ತು 5 ರವರು ತನಗೆ ಗೊತ್ತು, ಚಾಸಾ-10, 11, 12, ಫ್ರಾಸಾ-6 ಮತ್ತು 8, ರವರು ತನಗೆ ಗೊತ್ತು, ಮೃತ ಸೋಮಲೆಪ್ಪ ನಾಯಕ ಇವರ ಪರಿಚಯ ತನಗೆ ಇತ್ತು, ಮೃತ ಸೋಮಲೆಪ್ಪ ನಾಯಕ ಹತ್ತಿಕಟ್ಟಿ ತಾಂಡಾದಲ್ಲಿ ಇರುತ್ತಿದ್ದು, ಅವರು ತಾಂಡಾದ ಯಜಮಾನರಾಗಿದ್ದರು, ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿ ತನಗೆ ಪರಿಚಯ ಇರುತ್ತಾನೆ, ಆರೋಪಿಗೆ ಮದುವೆಯಾಗಿರುತ್ತದೆ, ಆತನಿಗೆ ಮೂರು ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಇರುತ್ತಾರೆ, ಆರೋಪಿಗೂ ಮತ್ತು ಆತನ ಹೆಂಡತಿಗೂ ಮಧ್ಯ ಜಗಳ ಇತ್ತು, ಈ ಕಾರಣಕ್ಕಾಗಿ ಆರೋಪಿಯ ಹೆಂಡತಿಯು ತನ್ನ ತವರು ಮನೆಗೆ ಹೋಗಿ ವಾಸವಾಗಿದ್ದಳು, ಆದ್ದರಿಂದ ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿಕೊಡು ಎಂದು ಮೃತ ಸೋಮಲೆಪ್ಪ ನಾಯಕ ಇವರನ್ನು ಕೇಳುತ್ತಿದ್ದರು, ಆಗ ತಾನು, ಚಾಸಾ-10 ರಿಂದ 12 ಹಾಗೂ ಮೃತ ಸೋಮಲೆಪ್ಪ ನಾಯಕ ನಾವೆಲ್ಲಾ ಸೇರಿ ಆರೋಪಿಯ ಸಂಸಾರವನ್ನು ಸರಿ ಮಾಡಲು ಆರೋಪಿಯ ಹೆಂಡತಿಯ ತವರೂರಾದ ಚಂದಾಪುರ ಗ್ರಾಮಕ್ಕೆ ಹೋಗಿ ಪ್ರಯತ್ನ ಮಾಡಿದ್ದೆವು, ಆದರೂ ಕೂಡಾ ಆರೋಪಿಯ ಸಂಸಾರ ಸರಿ ಹೋಗಿರಲಿಲ್ಲ, ಈ ಕಾರಣಕ್ಕಾಗಿ ಆರೋಪಿಯು ಸದರಿ ಸೋಮಲೆಪ್ಪ ನಾಯಕ ಇವರ ಮೇಲೆ ಸಿಟ್ಟು ಇಟ್ಟುಕೊಂಡಿದ್ದನು ಹಾಗೂ ಹಾಗೆಯೇ ಮೃತ ಸೋಮಲೆಪ್ಪ ನಾಯಕನಿಗೆ ಹೊಡೆ ಬಡೆ ಮಾಡುವುದಾಗಿ ಹೇಳುತ್ತಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **40 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 04.03.2022 ರಂದು ರಾತ್ರಿ 08,00 ಗಂಟೆ ಸುಮಾರಿಗೆ ತಾನು, ಮೃತ ಸೋಮಲೆಪ್ಪ ನಾಯಕ, ಚಾಸಾ-10 ರಿಂದ 12 ರವರು ಸೇವಾಲಾಲ ದೇವಸ್ಥಾನದಲ್ಲಿ ಅದರ ಉದ್ಘಾಟನೆಗೆ ಸಂಬಂಧಿಸಿದಂತೆ ಸೇರಿದ್ದಾಗ, ಅಲ್ಲಿಗೆ ಆರೋಪಿಯು ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ಬಂದು, ಮೃತ ಸೋಮಲೆಪ್ಪ ನಾಯಕನಿಗೆ ಏ ನಾಯಕ ತನ್ನ ಸಂಸಾರವನ್ನು ನೀನು ಸರಿ ಮಾಡಿಲ್ಲ, ಹೊರಗೆ ಬಾ ನಿನಗೆ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಹೇಳಿರುತ್ತಾನೆ, ಆಗ ಸೇರಿದ್ದ ತಾವೆಲ್ಲರೂ ಆರೋಪಿಗೆ ಸರಿಯಾಗಿ ಮಾತನಾಡಬೇಕೆಂದು ಹೇಳಿರುತ್ತೇವೆ, ನಂತರ ಆರೋಪಿಯು ಚಪ್ಪಲಿಯನ್ನು ಹೊರಗೆ ಒಗೆದು, ದೇವಸ್ಥಾನದ ಒಳಗಡೆ ಬಂದಿದ್ದು, ಆಗ ತಾವು ಆತನನ್ನು ತಡೆಯಲು ಪ್ರಯತ್ನಿಸಿದರೂ ಕೂಡಾ, ಆತನು ದೇವಸ್ಥಾನದ ಕಂಬದ ಹತ್ತಿರ ಕುಳಿತಿದ್ದ ಸೋಮಲೆಪ್ಪ ನಾಯಕನಿಗೆ ಕಾಲಿನಿಂದ ಒದ್ದಿರುತ್ತಾನೆ ಮತ್ತು ಸೋಮಲೆಪ್ಪನ ಶರ್ಟನ್ನು ಹಿಡಿದು ಜಗ್ಗಿರುತ್ತಾನೆ ಮತ್ತು ತನ್ನ ಹತ್ತಿರ ಇದ್ದ ಚಾಕುವಿನಿಂದ ಸೋಮಲೆಪ್ಪನ ಗದ್ದಕ್ಕೆ, ಹೊಟ್ಟೆಗೆ, ಕೈಗೆ, ಕುತ್ತಿಗೆಗೆ ಚುಚ್ಚಿದ್ದರಿಂದಾಗಿ

ಸೋಮಲೆಪ್ಪನಿಗೆ ಭಾರೀ ರಕ್ತ ಗಾಯವಾಗಿರುತ್ತದೆ ಮತ್ತು ದೇವಸ್ಥಾನದ ತುಂಬೆಲ್ಲಾ ರಕ್ತವಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **41 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಯ ಬೆನ್ನಿನ ಹಿಂದೆ ಇನ್ನೊಂದು ಚೂರಿ ಇದ್ದು, ಅದನ್ನು ತಾನು ಕಸಿದುಕೊಂಡಿರುತ್ತೇನೆ, ನಂತರ ಆರೋಪಿಯು ಚುಚ್ಚಿದ ಚಾಕುವನ್ನು ತೆಗೆದುಕೊಂಡು ಅಲ್ಲಿಂದ ಹೊರಟು ಹೋಗಿರುತ್ತಾನೆ, ಈ ವಿಷಯ ತಿಳಿದ ನಂತರ ಫ್ರಾಸಾ-1, 5 ಮತ್ತು 6 ರವರು ಸ್ಥಳಕ್ಕೆ ಬಂದಿರುತ್ತಾರೆ, ತಾನು ಹಾಗೂ ಚಾಸಾ-10 ರವರು ನಡೆದ ವಿಷಯವನ್ನು ಫ್ರಾಸಾ-1 ರವರಿಗೆ ತಿಳಿಸಿರುತ್ತೇವೆ, ಹಾಗೆಯೇ ಫ್ರಾಸಾ-5 ಮತ್ತು 6 ರವರಿಗೂ ಕೂಡಾ ವಿಷಯವನ್ನು ತಿಳಿಸಿರುತ್ತೇವೆ, ನಂತರ ಫ್ರಾಸಾ-1 ಮತ್ತು 5 ರವರು ಫ್ರಾಸಾ-6 ರವರ ವಾಹನದಲ್ಲಿ ಸೋಮಲೆಪ್ಪ ನಾಯಕ ಇವರನ್ನು ಗದಗನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾರೆ ಎಂದು ಹೇಳಿರುತ್ತಾರೆ, ಆಗ ಸಮಯ ರಾತ್ರಿ 09,45 ಗಂಟೆಯಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **42 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಫ್ರಾಸಾ-1 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ, ಸದರಿ ದೂರನ್ನು ಫ್ರಾಸಾ-1 ರವರು ಹೇಳಿದಂತೆ ತಾನು ಬರೆದಿರುತ್ತೇನೆ, ಈಗ ಸದರಿ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಎರಡು ದಸ್ತೂರ ಸಹಿಗಳನ್ನು ಒಟ್ಟಾಗಿ ನಿಪಿ-1(ಎ) ಎಂದು ಗುರುತಿಸಲಾಯಿತು, ಫ್ರಾಸಾ-1 ರವರು ನಿಪಿ-1 ಕ್ಕೆ ತಮ್ಮ ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ, ಫ್ರಾಸಾ-1 ರವರು ದೂರನ್ನು ಕೊಟ್ಟಾಗ, ಸಮಯ ಬೆಳಗಿನ ಜಾವ 01,30 ಗಂಟೆಯಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **43 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಯಿಂದ ಕಸಿದುಕೊಂಡ ಇನ್ನೊಂದು ಚೂರಿಯನ್ನು ತಾನು ತಮ್ಮ ಮನೆಯಲ್ಲಿ ಇಟ್ಟಿದ್ದೆನು, ದಿಃ 06.03.2022 ರಂದು ತಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿ ಸದರಿ ಚೂರಿಯನ್ನು ಹಾಜರಪಡಿಸಿರುತ್ತೇನೆ, ಆಗ ಪೋಲೀಸರು ಸದರಿ ಚೂರಿಯನ್ನು ಚಾಸಾ-8 ಮತ್ತು ಫ್ರಾಸಾ-5 ರವರ ಸಮಕ್ಷಮ ಬೆಳಿಗ್ಗೆ 08,30 ರಿಂದ 09,15 ರ ವರೆಗೆ ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ, ಸದರಿ ಪಂಚನಾಮೆಯನ್ನು ನಿಪಿ-16 ಎಂದು ಮತ್ತು ತನ್ನ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು, ಆ ಸಮಯದಲ್ಲಿ ನಿಪಿ-17 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ, ಸದರಿ ಚೂರಿಯನ್ನು ಮು.ಮಾ.1 ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **44 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಯು ಮೃತ ಸೋಮಲೆಪ್ಪ ನಾಯಕನಿಗೆ ಚುಚ್ಚಲು ಉಪಯೋಗಿಸಿದ ಚಾಕುವನ್ನು ಮು.ಮಾ.6

ಎಂದು, ಘಟನೆಯ ಸಮಯದಲ್ಲಿ ಆರೋಪಿಯು ಧರಿಸಿದ್ದ ಫುಲ ತೋಳಿನ ಶರ್ಟನ್ನು ಮು.ಮಾ.8 ಎಂದು, ಘಟನೆಯ ಸಮಯದಲ್ಲಿ ಮೃತ ಸೋಮಲೆಪ್ಪ ನಾಯಕನು ಧರಿಸಿದ್ದ ಬನಿಯನ, ಚಡ್ಡಿ ಮತ್ತು ಲುಂಗಿಯನ್ನು ಮು.ಮಾ.2 ರಿಂದ 4 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ, ನಿಪಿ-2 ಮತ್ತು 3 ರಲ್ಲಿ ದೇವಸ್ಥಾನದ ಭಾವಚಿತ್ರಗಳು ಇರುತ್ತವೆ, ನಿಪಿ-3 ರಲ್ಲಿ ಗುನ್ನಾ ಸ್ಥಳದ ಭಾವಚಿತ್ರ ಇರುತ್ತದೆ, ಪೋಲೀಸರು ತನ್ನನ್ನು ವಿಚಾರಿಸಿ ತನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **45 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 17.03.2022 ರಂದು, ತಾನು ಮುಂಡರಗಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ, ಸದರಿ ಹೇಳಿಕೆಯನ್ನು ನಿಪಿ-19 ಎಂದು, ತನ್ನ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-19(ಎ) ಎಂದು ಗುರುತಿಸಲಾಯಿತು, ಮೃತ ಸೋಮಲೆಪ್ಪ ನಾಯಕನು ತನ್ನ ಸಂಸಾರವನ್ನು ಸರಿಪಡಿಸಲಿಲ್ಲ ಎಂಬ ದ್ವೇಷವನ್ನು ಇಟ್ಟುಕೊಂಡು, ಆರೋಪಿ ಆತನನ್ನು ಕೊಲೆ ಮಾಡಿರುತ್ತಾನೆ, ಹಾಗೆಯೇ ಸೋಮಲೆಪ್ಪ ನಾಯಕನನ್ನು ಯಾವುದಾದರೂ ಕಾರ್ಯಕ್ರಮಗಳಲ್ಲಿ ನೋಡಿದಾಗ, ತನ್ನ ಸಂಸಾರವನ್ನು ಸರಿ ಮಾಡದೇ ಇದ್ದುದರಿಂದ ಹೊಡೆಯುವುದಾಗಿ ಆರೋಪಿಯು ಹೇಳುತ್ತಿದ್ದನು, ಘಟನೆಯನ್ನು ದೇವಸ್ಥಾನದ ಗರ್ಭಗುಡಿಯ ಒಳಗಿರುವ ಲೈಟಿನ ಬೆಳಕಿನಲ್ಲಿ ಹಾಗೂ ತಾವು ಕುಳಿತ ಸ್ಥಳದಲ್ಲಿದ್ದ ಲೈಟಿನ ಬೆಳಕಿನಲ್ಲಿ ಹಾಗೂ ಬೀದಿ ಲೈಟಿನ ಬೆಳಕಿನಲ್ಲಿ ನೋಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **46 –** ಪ್ರಾಸಾ**-11** ರೂಪಲೆಪ್ಪ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ, ಪ್ರಾಸಾ-1 ರವರು ತನಗೆ ಗೊತ್ತು, ಚಾಸಾ-8, ಪ್ರಾಸಾ-5, ಚಾಸಾ-11, 12 ಮತ್ತು ಪ್ರಾಸಾ-6 ರವರು ತನಗೆ ಪರಿಚಯ ಇರುತ್ತಾರೆ, ಮೃತ ಸೋಮಲೆಪ್ಪ ನಾಯಕ ಇವರ ಪರಿಚಯ ತನಗೆ ಇತ್ತು, ಪ್ರಾಸಾ-1 ರವರು ಮೃತ ಸೋಮಲೆಪ್ಪ ನಾಯಕ ಇವರ ಹೆಂಡತಿ ಇರುತ್ತಾಳೆ, ಮೃತ ಸೋಮಲೆಪ್ಪ ನಾಯಕ ಇವರು ಒಕ್ಕಲುತನ ಮಾಡುತ್ತಿದ್ದು, ಅವರು ತಾಂಡಾದ ಯಜಮಾನರಾಗಿದ್ದರು, ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿ ತನಗೆ ಪರಿಚಯ ಇರುತ್ತಾನೆ, ಆರೋಪಿಗೆ ಮದುವೆಯಾಗಿರುತ್ತದೆ, ಆತನಿಗೆ ಮೂರು ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **47 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಗೂ ಮತ್ತು ಆತನ ಹೆಂಡತಿಗೂ ಮಧ್ಯ ಜಗಳ ಆಗುತ್ತಿದ್ದುದರಿಂದ, ಆರೋಪಿಯ ಹೆಂಡತಿ ತನ್ನ ತವರು ಮನೆಯಲ್ಲಿ ಇರುತ್ತಾಳೆ, ಆದ್ದರಿಂದ ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿಕೊಡು ಎಂದು ಮೃತ ಸೋಮಲೆಪ್ಪ ನಾಯಕ ಇವರನ್ನು ಕೇಳುತ್ತಿದ್ದನು, ಒಂದು ಸಾರಿ ಸದರಿ ಸೋಮಲೆಪ್ಪ ನಾಯಕ ಇವರು ಆರೋಪಿಯ ಸಂಸಾರವನ್ನು ಸರಿ ಮಾಡಿಕೊಟ್ಟಿದ್ದರು, ನಂತರ ಆರೋಪಿಯ ಹೆಂಡತಿಯು ತನ್ನ ತವರು ಮನೆಗೆ ಹೋಗಿ ವಾಪಸ್ ಬಂದಿರಲಿಲ್ಲ, ಆದ್ದರಿಂದ ಆರೋಪಿಯು ಮೃತ ಸೋಮಲೆಪ್ಪ ನಾಯಕ

ಇವರಿಗೆ ತನ್ನ ಸಂಸಾರ ಸರಿ ಮಾಡಿಕೊಡಲಿಲ್ಲ ಎಂದು ಸದರಿ ಸೋಮಲೆಪ್ಪನ ಮೇಲೆ ಸಿಟ್ಟು ಇಟ್ಟುಕೊಂಡಿದ್ದನು ಮತ್ತು ಸೋಮಲೆಪ್ಪನಿಗೆ ತನ್ನ ಸಂಸಾರವನ್ನು ಸರಿ ಮಾಡಿಲ್ಲ, ತನ್ನನ್ನು ನೋಡಿಕೊಳ್ಳುತ್ತೇನೆ ಎಂದು ಊರಿನಲ್ಲಿ ಯಾವುದೇ ಕಾರ್ಯಕ್ರಮ ಇದ್ದಾಗ ಅಲ್ಲಿ ಸೋಮಲೆಪ್ಪ ನಾಯಕ ಕಂಡರೆ ಹೇಳುತ್ತಿದ್ದನು, ಈ ಕಾರಣಕ್ಕಾಗಿ ಒಂದೊಂದು ಸಾರಿ ಸದರಿ ಸೋಮಲೆಪ್ಪ ನಾಯಕ ಈತನು ಕೆಲವು ಕಾರ್ಯಕ್ರಮಗಳಿಗೆ ಬರುತ್ತಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **48 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಈಗ ಸುಮಾರು 3 ವರ್ಷಗಳ ಹಿಂದೆ, ತಾವು ಶಿವಾಜಿ/ಸೇವಾಲಾಲ ದೇವಸ್ಥಾನವನ್ನು ಉದ್ಘಾಟನೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ತಾನು, ಮೃತ ಸೋಮಲೆಪ್ಪ ನಾಯಕ, ಚಾಸಾ-11, 12 ಮತ್ತು ಫ್ರಾಸಾ-10 ರವರು ಸೇರಿ ಸದರಿ ದೇವಸ್ಥಾನದಲ್ಲಿಯೇ ರಾತ್ರಿ 07,30 ಗಂಟೆಗೆ ಕುಳಿತುಕೊಂಡು ಮಾತನಾಡುತ್ತಿದ್ದಾಗ, ರಾತ್ರಿ 08,00 ಗಂಟೆ ಸುಮಾರಿಗೆ ಆರೋಪಿ ಅಲ್ಲಿಗೆ ಬಂದು ತನ್ನ ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ಮೃತ ಸೋಮಲೆಪ್ಪ ನಾಯಕ ಈತನಿಗೆ ಅಲ್ಲೇನು ನ್ಯಾಯ ಹೇಳುತ್ತೀ, ಹೊರಗೆ ಎದ್ದು ಬಾ ಎಂದು ಹೇಳಿರುತ್ತಾನೆ, ಆಗ ತಾನು ಆರೋಪಿಗೆ ಹಿರಿಯರು ಇರುತ್ತಾರೆ ಹಾಗೆಲ್ಲಾ ಬೈದಾಡಬೇಡಾ ಎಂದು ಹೇಳಿರುತ್ತೇನೆ, ನಂತರ ಆರೋಪಿಯು ಚಪ್ಪಲಿಯನ್ನು ಅಲ್ಲಿಯೇ ಬಿಟ್ಟು, ಸದರಿ ದೇವಸ್ಥಾನದ ಒಳಗೆ ಬಂದು, ಕಂಬಕ್ಕೆ ಕುಳಿತಿದ್ದ ಸೋಮಲೆಪ್ಪ ನಾಯಕ ಈತನಿಗೆ ಕಾಲಿನಿಂದ ಒದ್ದಿರುತ್ತಾನೆ, ಆಗ ಸೋಮಲೆಪ್ಪನು ಬಿದ್ದಿರುತ್ತಾನೆ, ತಾನು ಆತನನ್ನು ಎಬ್ಬಿಸಿರುತ್ತೇನೆ, ಆಗ ಆರೋಪಿಯು ಸೋಮಲೆಪ್ಪ ನಾಯಕನ ಎದೆಯ ಮೇಲಿರುವ ಅಂಗಿಯನ್ನು ಹಿಡಿದು, ಚಾಕುವಿನಿಂದ ಸೋಮಲೆಪ್ಪನ ಕುತ್ತಿಗೆಗೆ, ಹೊಕ್ಕಳಕ್ಕೆ ಹೊಟ್ಟೆಗೆ, ಎಡಕೈಗೆ ಚುಚ್ಚಿರುತ್ತಾನೆ, ಇದರಿಂದಾಗಿ ಸೋಮಲೆಪ್ಪ ನಾಯಕನಿಗೆ ರಕ್ತಗಾಯಗಳಾದವು, ಆಗ ಅಲ್ಲಿದ್ದ ನಾವೆಲ್ಲಾ ಸೇರಿ ಬಿಡಿಸಿರುತ್ತೇವೆ, ಆಗ ಫ್ರಾಸಾ-10 ರವರು ಆರೋಪಿಯ ನಡದಲ್ಲಿರುವ ಇನ್ನೊಂದು ಜಂಬೆಯನ್ನು ಕಸಿದು ಕೊಂಡಿರುತ್ತಾರೆ, ನಂತರ ಆರೋಪಿಯು ಚಾಕುವನ್ನು ತೆಗೆದುಕೊಂಡು ತನ್ನ ಮನೆ ಕಡೆಗೆ ಹೊರಟು ಹೋಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **49 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಅಲ್ಲಿಗೆ ಫ್ರಾಸಾ-1 ರವರು ಮತ್ತು ಆಕೆಯ ಅಳಿಯ ಓಡಿ ಬಂದಿರುತ್ತಾರೆ, ಆಗ ಅಲ್ಲಿದ್ದ ತಾವು ಫ್ರಾಸಾ-1 ರವರಿಗೆ ನಡೆದ ವಿಚಾರವನ್ನು ತಿಳಿಸಿರುತ್ತೇವೆ, ನಂತರ ಫ್ರಾಸಾ-1 ರವರು ಸೋಮಲೆಪ್ಪ ನಾಯಕ ಇವರನ್ನು ತಮ್ಮ ಊರಿನ ಒಬ್ಬರ ವಾಹನದಲ್ಲಿ ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತಾರೆ, ಈ ಘಟನೆಯು ರಾತ್ರಿ 08,00 ರಿಂದ 08,15 ರ ವರೆಗೆ ಆಗಿರುತ್ತದೆ, ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರು ಪರಿಶೀಲನೆ ಮಾಡಿ, ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ, ಘಟನೆಯ ಬಗ್ಗೆ ಪೋಲೀಸರಿಗೆ ದೂರನ್ನು ಫ್ರಾಸಾ-1 ರವರು ಕೊಟ್ಟಿರುತ್ತಾರೆ, ಪೋಲೀಸರು ತನ್ನನ್ನು ವಿಚಾರಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **50 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಯು ಮೃತ ಸೋಮಲಪ್ಪ ನಾಯಕನಿಗೆ ಚುಚ್ಚಲು ಉಪಯೋಗಿಸಿದ ಚಾಕುವನ್ನು ಮು.ಮಾ.6 ಎಂದು, ಆರೋಪಿಯ ಹತ್ತಿರ ಇದ್ದ ಇನ್ನೊಂದು ಜಂಬಿಯನ್ನು ಮು.ಮಾ.1 ಎಂದು ಗುರುತಿಸಲಾಗಿರುತ್ತದೆ, ಘಟನೆಯ ಸಮಯದಲ್ಲಿ ಮೃತ ಸೋಮಲಪ್ಪ ನಾಯಕನು ಧರಿಸಿದ್ದ ಬನಿಯನ ಮತ್ತು ಮತ್ತು ಲುಂಗಿಯನ್ನು ಮು.ಮಾ.2 ಮತ್ತು 4 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ, ಘಟನೆಯ ಸಮಯದಲ್ಲಿ ಆರೋಪಿಯು ಧರಿಸಿದ್ದ ಫುಲ ತೋಳಿನ ಶರ್ಟನ್ನು ಮು.ಮಾ.8 ಎಂದು ಗುರುತಿಸಲಾಗಿರುತ್ತದೆ, ಆರೋಪಿಯು ಸೋಮಲಪ್ಪ ನಾಯಕನಿಗೆ ಚಾಕುವಿನಿಂದ ಚುಚ್ಚಿದ್ದರಿಂದ ರಕ್ತವು ದೇವಸ್ಥಾನದ ಒಳಗೆಲ್ಲಾ ಆಗಿತ್ತು, ನಿಪಿ-2 ರಲ್ಲಿ ದೇವಸ್ಥಾನದ ಭಾವಚಿತ್ರ ಇರುತ್ತದೆ, ನಿಪಿ-3 ರಲ್ಲಿ ಘಟನಾ ಸ್ಥಳದ ಭಾವಚಿತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **51 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಘಟನೆಯಾದ 3 – 4 ದಿನಗಳ ನಂತರ, ತಾನು ಮುಂಡರಗಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ, ಸದರಿ ಹೇಳಿಕೆಯನ್ನು ನಿಪಿ-20 ಎಂದು, ಎರಡು ತನ್ನ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು, ಆರೋಪಿಯು ಸೋಮಲಪ್ಪ ನಾಯಕ ಈತನು ತನ್ನ ಸಂಸಾರವನ್ನು ಸರಿ ಮಾಡಲಿಲ್ಲ ಎಂದು ಸದರಿ ಸೋಮಲಪ್ಪನಿಗೆ ಚಾಕುವಿನಿಂದ ತಿವಿದು, ಆತನ ಕೊಲೆ ಮಾಡಿರುತ್ತಾನೆ, ಘಟನೆಯನ್ನು ದೇವಸ್ಥಾನದ ಗರ್ಭಗುಡಿಯ ಒಳಗಿರುವ ಲೈಟಿನ ಬೆಳಕಿನಲ್ಲಿ ಹಾಗೂ ತಾವು ಕುಳಿತ ಸ್ಥಳದಲ್ಲಿದ್ದ ಲೈಟಿನ ಬೆಳಕಿನಲ್ಲಿ ಹಾಗೂ ಬೀದಿ ಲೈಟಿನ ಬೆಳಕಿನಲ್ಲಿ ನೋಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **52 –** ಫ್ರಾಸಾ**-12** ಜಾಫರ ಬಚ್ಚೇರಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 05.03.2022 ರಂದು ಚಾಸಾ-29 ರವರು ತನಗೆ ಮತ್ತು ಹೆಚ್,ಸಿ, 961 ರವರಿಗೆ ಈ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಠಾಣೆಗೆ ಕರೆತರುವಂತೆ ಆದೇಶ ಮಾಡಿರುತ್ತಾರೆ, ಆ ಪ್ರಕಾರ ತಾನು ಹಾಗೂ ಹೆಚ್,ಸಿ, 961 ರವರು ಅದೇ ದಿನ ಡೋಣಿ, ಡೋಣಿ ತಾಂಡಾ, ದಿಂಡೂರು, ಸಿಂಗಟರಾಯನಕೇರಿ, ಸಿಂಗಟರಾಯನಕೇರಿ ತಾಂಡಾ ಇಲ್ಲಿ ಎಲ್ಲಾ ಕಡೆ ಹುಡುಕಾಡಿ, ನಂತರ ಅತ್ತಿಕಟ್ಟಿ ಗ್ರಾಮ ಮತ್ತು ತಾಂಡಾದ ಹೊರವಲಯದಲ್ಲಿ ಹುಡುಕಾಡುವಾಗ, ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿರುವ ಹೊಲದಲ್ಲಿ ಆರೋಪಿಯು ಸಿಕ್ಕಿರುತ್ತಾನೆ, ಆಗ ಸಮಯ ಮಧ್ಯಾಹ್ನ 02,00 ಗಂಟೆಯಾಗಿತ್ತು, ಆತನನ್ನು ಹಿಡಿದುಕೊಂಡು ಬಂದು ಚಾಸಾ-29 ರವರ ಮುಂದೆ ಮಧ್ಯಾಹ್ನ 03,00 ಗಂಟೆಗೆ ಹಾಜರಪಡಿಸಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **53 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಾನು ಹಿಡಿದುಕೊಂಡು ಬಂದು ಚಾಸಾ-29 ರವರ ಮುಂದೆ ಹಾಜರ ಪಡಿಸಿದ ವ್ಯಕ್ತಿಯು ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ಆರೋಪಿಯಾಗಿರುತ್ತಾನೆ, ಆ ಸಮಯದಲ್ಲಿ ಆರೋಪಿ ಧರಿಸಿದ್ದ

ಶರ್ಟನ್ನು ಮು.ಮಾ.8 ಎಂದು ಗುರುತಿಸಲಾಗಿರುತ್ತದೆ, ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **54 – ಫ್ರಾಸಾ-13** ಮಹೇಶ ಹೂಗಾರ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 05.03.2022 ರಂದು, ಚಾಸಾ-29 ರವರ ಆದೇಶದಂತೆ, ಘಟನಾ ಸ್ಥಳದ ಪಂಚನಾಮೆ ಕಾಲಕ್ಕೆ ನಿಪಿ-2 ಮತ್ತು 3 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ, ಹಾಗೆಯೇ ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಶವದ ಪಂಚನಾಮೆ ಕಾಲಕ್ಕೆ ಕೂಡಾ ನಿಪಿ-7 ಮತ್ತು 8 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ, ಹಾಗೆಯೇ ಆರೋಪಿತನ ಶರ್ಟ ಜಪ್ತ ಪಂಚನಾಮೆ ಕಾಲಕ್ಕೆ ಕೂಡಾ ನಿಪಿ-13 ಮತ್ತು 14 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ, ಹಾಗೆಯೇ ಕೃತ್ಯಕ್ಕೆ ಬಳಸಿದ ಚಾಕು ಮತ್ತು ಮಚ್ಚು ಜಪ್ತ ಪಂಚನಾಮೆ ಕಾಲಕ್ಕೆ ಕೂಡಾ ನಿಪಿ-12 ರಂತೆ ಫೋಟೋವನ್ನು ತೆಗೆದಿರುತ್ತೇನೆ, ಹಾಗೆಯೇ ಮೃತನ ಮೈಮೇಲೆ ಇದ್ದ ಬಟ್ಟೆ ಜಪ್ತ ಪಂಚನಾಮೆ ಕಾಲಕ್ಕೆ ಕೂಡಾ ಫೋಟೋವನ್ನು ತೆಗೆದಿರುತ್ತೇನೆ, ಚೂರಿ ಜಪ್ತ ಕಾಲಕ್ಕೆ ಕೂಡಾ ನಿಪಿ-17 ರಂತೆ ಫೋಟೋವನ್ನು ತೆಗೆದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **55 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಈ ಎಲ್ಲಾ ಫೋಟೋಗಳನ್ನು ಠಾಣೆಯ ನಿಕ್ಕಾನ ಕಂಪನಿಯ ಕ್ಯಾಮೆರಾದಲ್ಲಿ ತೆಗೆದಿರುತ್ತೇನೆ, ಫೋಟೋಗಳನ್ನು ಕಂಪ್ಯೂಟರ ಮೂಲಕ ಸಿ,ಡಿ, ಗೆ ವರ್ಗಾಯಿಸಿ, ಸಿ, ಡಿ, ಯನ್ನು ತಯಾರಿಸಿ ಕೊಟ್ಟಿರುತ್ತೇನೆ, ತಾನು ತಯಾರಿಸಿ ಕೊಟ್ಟ ಸಿ,ಡಿ,ಯನ್ನು ನಿಪಿ-21 ಎಂದು ಗುರುತಿಸಲಾಯಿತು, ಈ ಬಗ್ಗೆ ತಾನು 65(ಬಿ) ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ, ಸದರಿ ಪ್ರಮಾಣ ಪತ್ರವನ್ನು ನಿಪಿ-22 ಎಂದು, ತನ್ನ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು, ಈ ಬಗ್ಗೆ ತಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **56 – ಫ್ರಾಸಾ-14** ಅಂದಪ್ಪ ಅಣಜಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 25.04.2022 ರಂದು, ಚಾಸಾ-29 ರವರು ತನಗೆ ಗುನ್ನಾ ಜಾಗೆಯನ್ನು ಚಾಸಾ-26 ರವರಿಗೆ ತೋರಿಸಬೇಕೆಂದು ಆದೇಶವನ್ನು ಮಾಡಿದ್ದು, ಆ ಪ್ರಕಾರ ತಾನು ಅದೇ ದಿನ ಚಾಸಾ-26 ರವರನ್ನು ಕರೆದುಕೊಂಡು ಅತ್ತಿಕಟ್ಟಿ ತಾಂಡಾದಲ್ಲಿರುವ ಸೇವಾಲಾಲ ದೇವಸ್ಥಾನಕ್ಕೆ ಹೋಗಿ, ಘಟನಾ ಜಾಗೆಯನ್ನು ತೋರಿಸಿದ್ದು, ಚಾಸಾ-26 ರವರು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ, ನಕಾಶೆಯನ್ನು ತಯಾರಿಸಿರುತ್ತಾರೆ, ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ತಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **57 – ಫ್ರಾಸಾ-15** ಡಾಃ ರಾಜು ಜಿ ಎಮ್**,** ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ

ಸಂಬಂಧಿಸಿದಂತೆ, ದಿನಾಂಕ 05.03.2022 ರಂದು ಮಧ್ಯಾಹ್ನ 02,45 ರ ಸುಮಾರಿಗೆ, ಮೃತ ಸೋಮಲೆಪ್ಪ ಸೋ/ಶೆಲಪ್ಪ ನಾಯಕ್ ಅವರ ಮೃತ ದೇಹದ ಪಿಎಂ ಪರೀಕ್ಷೆಯನ್ನು ನಡೆಸಲು ತನಗೆ ಸಿಡಬ್ಲ್ಯೂ-29 ರಿಂದ ವಿನಂತಿ ಬಂದಿತು, ವಯಸ್ಸು: 48 ವರ್ಷಗಳು ಮತ್ತು ಪಿಡಬ್ಲ್ಯೂ-9, ಅದೇ ದಿನ, ಮಧ್ಯಾಹ್ನ 03,00 ರಿಂದ ಸಂಜೆ 04,00 ರ ನಡುವೆ ತಾನು ಸದರಿ ಮೃತ ದೇಹದ ಪಿಎಂ ಪರೀಕ್ಷೆಯನ್ನು ನಡೆಸಿದ್ದೇನೆ, ಬಾಹ್ಯ ಪರೀಕ್ಷೆ: ಗುರುತಿನ ಗುರುತು: 1) ಹಣೆಯ ಎಡಭಾಗದ ಮೇಲೆ ಕಪ್ಪು ಬಣ್ಣದ ಮಚ್ಚೆ ಇದ್ದು, ಎಡಗಣ್ಣಿನಿಂದ 6 ಸೆಂ,ಮೀ ಎತ್ತರದಲ್ಲಿದೆ, 0,25 ಸೆಂ,ಮೀ X 0,25 ಸೆಂ,ಮೀ ಅಳತೆ, ಕೂದಲುರಹಿತ ಮತ್ತು ಉಬ್ಬಿಲ್ಲ, 2) ಎಡ ಮೊಣಕಾಲಿನ ಚಿಪ್ಪಿನ ಮೇಲೆ ಹಸಿರು ಬಣ್ಣದ ಹಚ್ಚೆ ಇದ್ದು, 10 ಸೆಂ,ಮೀ ಸುತ್ತಳತೆ ಮತ್ತು ವೃತ್ತಾಕಾರದ ಆಕಾರದಲ್ಲಿದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **58 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಮೃತರು ಪುರುಷ, ಶ್ರೀ ಸೋಮಲೆಪ್ಪ ಶೆಲಪ್ಪ ನಾಯಕ್, ವಯಸ್ಸು: 48 ವರ್ಷ, ಉದ್ದ 160 ಸೆಂ,ಮೀ, ನೆತ್ತಿಯ ಕೂದಲು 02 ಸೆಂ,ಮೀ, ಕಪ್ಪು ಮತ್ತು ಬೂದು ಬಣ್ಣ, ಮಧ್ಯಮ ಮೈಬಣ್ಣ ಮತ್ತು ಪೋಷಣೆ, ಗೋಧಿ ಮೈಬಣ್ಣ, ಮೃತ ವ್ಯಕ್ತಿಯ ಬೆನ್ನಿನ ಪ್ರದೇಶದ ಅವಲಂಬಿತ ಭಾಗದಲ್ಲಿ ಮರಣೋತ್ತರ ಕಲೆಗಳು ಇರುತ್ತವೆ ಮತ್ತು ಅದು ಸ್ಥಿರವಾಗಿರುತ್ತದೆ, ಮೃತ ವ್ಯಕ್ತಿಯಾದ್ಯಂತ ರಿಗರ್ ಮೋರ್ಟಿಸ್ ಕಂಡುಬರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **59 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಬಾಹ್ಯ ಗಾಯಗಳು: 1) ಗಲ್ಲದ ಮೇಲೆ ಇರುವ ಛೇದಿತ ಗಾಯ, ಬಾಯಿಯ ಕೋನದ ಕೆಳಗೆ 06 ಸೆಂ,ಮೀ, ಇದೆ, 02 ಸೆಂ,ಮೀ X 0,5 ಸೆಂ,ಮೀ X 01 ಸೆಂ,ಮೀ ಅಳತೆ, ಕೆಂಪು ಬಣ್ಣ ಮತ್ತು ರೇಖೀಯ ಆಕಾರ, 2) ಮುಖದ ಎಡಭಾಗದ ಮೇಲೆ ಪಕ್ಕದಲ್ಲಿ ಇರುವ ಎರಡು ಛೇದಿತ ಗಾಯ, ಎಡ ಕಿವಿಯ ಬಳಿ ಇದೆ, ತಲಾ 03 ಸೆಂ,ಮೀ X 01 ಸೆಂ,ಮೀ X 01 ಸೆಂ,ಮೀ ಅಳತೆ, ಕೆಂಪು ಬಣ್ಣ ಮತ್ತು ಕಮಾನಿನ ಆಕಾರ, 3) ಕುತ್ತಿಗೆಯ ಎಡಭಾಗದ ಮೇಲೆ ಇರುವ ಇರಿತ ಗಾಯ, ಥೈರಾಯ್ಡ್ ಕಾರ್ಟಿಲೆಜ್ ಮೇಲೆ ಇದೆ, 01 ಸೆಂ,ಮೀ X 0,8 ಸೆಂ,ಮೀ X 02 ಸೆಂ,ಮೀ ಅಳತೆ, ಕೆಂಪು ಬಣ್ಣ ಮತ್ತು ಅಂಡಾಕಾರದ ಆಕಾರ, 4) ಎದೆಯ ಎಡಭಾಗದಲ್ಲಿ ಇರುವ ಬಹು ಸವೆತಗಳು, ಸಂಖ್ಯೆಯಲ್ಲಿ "02", ಎರಡೂ ಎಡ ಮೊಲೆತೊಟ್ಟುಗಳ ಮೇಲೆ 05 ಸೆಂ,ಮೀ, ಇದೆ, ಪ್ರತಿಯೊಂದೂ 04 ಸೆಂ,ಮೀ X 01 ಸೆಂ,ಮೀ ಮತ್ತು 03 ಸೆಂ,ಮೀ X 01 ಸೆಂ,ಮೀ ಅಳತೆ, ಕೆಂಪು ಬಣ್ಣ ಮತ್ತು ಅನಿಯಮಿತ ಆಕಾರ, 5) ಹೊಟ್ಟೆಯ ಬಲಭಾಗದ ಮೇಲೆ ಇರುವ ಇರಿತದ ಗಾಯ, ಕ್ಸಿಫಾಯಿಡ್ ಪ್ರಕ್ರಿಯೆಯ ಕೆಳಗೆ 07 ಸೆಂ,ಮೀ, ಇದೆ, 02 ಸೆಂ,ಮೀ, X 0,1 ಸೆಂ,ಮೀ, X 01 ಸೆಂ,ಮೀ, ಇದೆ, ಕೆಂಪು ಬಣ್ಣ ಮತ್ತು ಸ್ಪಿಂಡಲ್ ಆಕಾರದಲ್ಲಿದೆ, 6) ಹೊಟ್ಟೆಯ ಬಲಭಾಗದ ಮೇಲೆ ಇರುವ ಮೂಗೇಟುಗಳ ಸವೆತ, ಹೊಕ್ಕುಳದಿಂದ 08 ಸೆಂ,ಮೀ, ಇದೆ, 05 ಸೆಂ,ಮೀ, X 0,5 ಸೆಂ,ಮೀ, ಇದೆ, ಕೆಂಪು ಬಣ್ಣ ಮತ್ತು ತಲೆಕೆಳಗಾದ "C" ಆಕಾರದಲ್ಲಿದೆ, 7) ಹೊಟ್ಟೆಯ ಎಡಭಾಗದ ಮೇಲೆ ಇರುವ ಇರಿತದ ಗಾಯ, ಹೊಕ್ಕುಳಿನಿಂದ 01 ಸೆಂ,ಮೀ, ಇದೆ, 03 ಸೆಂ,ಮೀ, X 0,1 ಸೆಂ,ಮೀ, ಇದೆ, ಕೆಂಪು ಬಣ್ಣ ಮತ್ತು ಬೆಣೆ ಆಕಾರದಲ್ಲಿದೆ, 8) ಎಡ ಮುಂಗೈಯ ಒಳಭಾಗದ ಮೇಲೆ

ಇರುವ ಇರಿತದ ಗಾಯ, ಎಡ ಮೊಣಕೈ ಜಂಟಿ ಕೆಳಗೆ 06 ಸೆಂ,ಮೀ, ಇದೆ, 02 ಸೆಂ,ಮೀ, X 01 ಸೆಂ,ಮೀ, ಇದೆ, ಕೆಂಪು ಬಣ್ಣ ಮತ್ತು ಸ್ಪಿಂಡಲ್ ಆಕಾರದಲ್ಲಿದೆ, 9) ಎಡ ಮುಂಗೈ ಮೇಲೆ ಇರಿತದ ಗಾಯ, ಎಡ ಕ್ಯೂಬಿಟಲ್ ಫೊಸಾ ಕೆಳಗೆ 06 ಸೆಂ,ಮೀ ಇದೆ, 03 ಸೆಂ,ಮೀ X 01 ಸೆಂ,ಮೀ X 01 ಸೆಂ,ಮೀ ಅಳತೆ, ಕೆಂಪು ಬಣ್ಣ ಮತ್ತು ಸ್ಪಿಂಡಲ್ ಆಕಾರದಲ್ಲಿದೆ, 10) ಎಡ ಮಧ್ಯ ಮುಂಗೈ ಮೇಲೆ ಇರುವ ಛೇದಿತ ಗಾಯ, ಎಡ ಮೊಣಕೈ ಜಂಟಿಗಿಂತ 12 ಸೆಂ,ಮೀ ಕೆಳಗೆ ಸ್ಥಿರವಾಗಿದೆ, 07 ಸೆಂ,ಮೀ X 03 ಸೆಂ,ಮೀ X 03 ಸೆಂ,ಮೀ ಅಳತೆ, ಆಧಾರವಾಗಿರುವ ಆಂತರಿಕ ರಚನೆಗಳು ತೆರೆದಿರುತ್ತವೆ, ಕೆಂಪು ಬಣ್ಣ ಮತ್ತು ಸ್ಪಿಂಡಲ್ ಆಕಾರದಲ್ಲಿರುತ್ತವೆ ಹಾಗೂ ಸದರಿ ತಿಳಿಸಲಾದ ಗಾಯಗಳು ಮರಣೋತ್ತರ ಪರೀಕ್ಷೆಯ ಪೂರ್ವ ಸ್ವರೂಪದಲ್ಲಿರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **60 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆಂತರಿಕ ಪರೀಕ್ಷೆ: ಕಪಾಲ ಮತ್ತು ಬೆನ್ನುಹುರಿ: 1, ನೆತ್ತಿ ಮತ್ತು ತಲೆಬುರುಡೆ: ಅಖಂಡ, 2, ತಲೆಬುರುಡೆಯ ಬುಡ: ಅಖಂಡ, 3, ಪೊರೆಗಳು: ಅಖಂಡ, 4, ಮೆದುಳು: ಅಖಂಡ ಮತ್ತು ಸಿ/ಎಸ್ ದಟ್ಟಣೆ, 5, ಕಶೇರುಖಂಡ ಮತ್ತು ಬೆನ್ನುಹುರಿ: ಅಖಂಡ, 6, ಕುತ್ತಿಗೆಯ ಛೇದನ: ಥೈರಾಯ್ಡ್ ಕಾರ್ಟಿಲೆಜ್‌ನ ಅಂಚಿನಲ್ಲಿ ಆಂತರಿಕ ಶೀರ್ಷಧಮನಿ ಅಪಧಮನಿಯ ಛಿದ್ರ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **61 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಎದೆಗೂಡಿನ: 1, ಬಾಯಿ, ಗಂಟಲಕುಳಿ ಮತ್ತು ಅನ್ನನಾಳ: ಅಖಂಡ, 2, ಗೋಡೆಗಳು, ಪಕ್ಕೆಲುಬುಗಳು ಮತ್ತು ಕಾರ್ಟಿಲೆಜ್: ಅಖಂಡ, 3, ಪ್ಲೆರೆ ಮತ್ತು ಕುಹರ: ಅಖಂಡ, 4, ಧ್ವನಿಪೆಟ್ಟಿಗೆ ಮತ್ತು ಶ್ವಾಸನಾಳ: ಅಖಂಡ, 5, ಬಲ ಮತ್ತು ಎಡ ಶ್ವಾಸಕೋಶ: ಅಖಂಡ ಮತ್ತು ಸಿ/ಎಸ್ ದಟ್ಟಣೆಯಿಂದ ಕೂಡಿದೆ, 6, ಹೃದಯದ ಹೃದಯಭಾಗ: ಅಖಂಡ, 7, ಹೃದಯ: ಅಖಂಡ ಮತ್ತು ಎಲ್ಲಾ ಕೋಣೆಗಳು ಖಾಲಿಯಾಗಿವೆ, 8, ದೊಡ್ಡ ನಾಳಗಳು: ಅಖಂಡ, 9, ಪರಿಧಮನಿಗಳು ಅಖಂಡ ಮತ್ತು ಪೇಟೆಂಟ್ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **62 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಹೊಟ್ಟೆ: 1, ಗೋಡೆಗಳು: ಅಖಂಡ, 2, ಪೆರಿಟೋನಿಯಂ ಕುಹರ: ಅಖಂಡ, 3, ಹೊಟ್ಟೆ ಮತ್ತು ಅದರ ವಿಷಯಗಳು: ಅಖಂಡ ಮತ್ತು ಖಾಲಿ, 4, ಸಣ್ಣ ಮತ್ತು ದೊಡ್ಡ ಕರುಳು ಮತ್ತು ಅದರ ವಿಷಯಗಳು: ಅಖಂಡ, 5, ಯಕೃತ್ತು: ಅಖಂಡ ಮತ್ತು ದಟ್ಟಣೆಯಿಂದ ಕೂಡಿದೆ, 6, ಗುಲ್ಮ: ಅಖಂಡ ಮತ್ತು ದಟ್ಟಣೆಯಿಂದ ಕೂಡಿದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **63 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಜನನಾಂಗ-ಮೂತ್ರ ಅಂಗ: 1, ಬಲ ಮತ್ತು ಎಡ ಮೂತ್ರಪಿಂಡಗಳು: ಅಖಂಡ ಮತ್ತು ಸಿ/ಎಸ್: ದಟ್ಟಣೆ, 2, ಮೂತ್ರಕೋಶ: ಅಖಂಡ ಮತ್ತು ಖಾಲಿ, 3, ಪೀಳಿಗೆಯ ಅಂಗಗಳು, ಬಾಹ್ಯ ಮತ್ತು

ಆಂತರಿಕ: ಅಖಂಡ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **64 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಮರಣದ ಸಮಯ: ಮರಣೋತ್ತರ ಪರೀಕ್ಷೆಗೆ 12 - 24 ಗಂಟೆಗಳ ಮೊದಲು, ದಿಃ 04.03.2022 ರಂದು ರಾತ್ರಿ 09,54 ಕ್ಕೆ ಆಸ್ಪತ್ರೆ ಸಾವು, "ಸೋಮಲೆಪ್ಪ ಶೆಲಪ್ಪ ನಾಯಕ್ ಅವರ ಸಾವಿಗೆ ಕಾರಣವೆಂದರೆ, ಹರಿತವಾದ ಮತ್ತು ಮೊನಚಾದ ಆಯುಧದಿಂದ ಕುತ್ತಿಗೆಗೆ ಗಾಯವಾಗಿ ರಕ್ತಸ್ರಾವದ ಆಘಾತದಿಂದ ಸಾವನ್ನಪ್ಪಿದ್ದಾರೆ" ಎಂದು ತಾನು ಅಭಿಪ್ರಾಯಪಡುತ್ತೇನೆ, ಈ ನಿಟ್ಟಿನಲ್ಲಿ, ತಾನು ಪ್ರಧಾನ ಮಂತ್ರಿ ಪರೀಕ್ಷಾ ವರದಿಯನ್ನು ನೀಡಿದ್ದೇನೆ, ಅದನ್ನು ನಿಪಿ-23 ಎಂದು ಗುರುತಿಸಲಾಗಿದೆ ಮತ್ತು ಸಾಕ್ಷಿಯ 2 ಸಹಿಗಳನ್ನು ಒಟ್ಟಿಗೆ ನಿಪಿ -23(ಎ) ಎಂದು ಗುರುತಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **65 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ11.07.2022 ರಂದು ಮಧ್ಯಾಹ್ನ 03,30 ಕ್ಕೆ ಚಾಸಾ -29 ಅವರು ಮರಣೋತ್ತರ ಪರೀಕ್ಷಾ ವರದಿಯಲ್ಲಿ ಉಲ್ಲೇಖಿಸಲಾದ ಗಾಯಗಳು ಅದರ ಜೊತೆಗೆ ಕಳುಹಿಸಲಾದ ಆಯುಧದಿಂದ ಉಂಟಾಗಬಹುದೇ ಎಂದು ಅಭಿಪ್ರಾಯ ನೀಡಲು ವಿನಂತಿಯನ್ನು ನೀಡಿದ್ದಾರೆ, ತಾನು ಹೇಳಿದ ಆಯುಧವನ್ನು ಪರೀಕ್ಷಿಸಿದ್ದೇನೆ ಮತ್ತು ಮರಣೋತ್ತರ ಪರೀಕ್ಷಾ ವರದಿಯಲ್ಲಿ ಉಲ್ಲೇಖಿಸಿದಂತೆ ಈ ರೀತಿಯ ಆಯುಧವು ಮೃತ ವ್ಯಕ್ತಿಯ ಮೇಲೆ ಇರುವ ಗಾಯಗಳಿಗೆ ಕಾರಣವಾಗುತ್ತದೆ ಎಂದು ತಾನು ಅಭಿಪ್ರಾಯಪಟ್ಟಿದ್ದೇನೆ, ತಾನು ಪರೀಕ್ಷಿಸಿದ ಆಯುಧವನ್ನು ಗುರುತಿಸಬಲ್ಲೆ, ಅದನ್ನು ಮು ಮಾ 6 ಎಂದು ಗುರುತಿಸಲಾಗಿದೆ, ಮು ಮಾ 6 ಪರೀಕ್ಷೆಯ ನಂತರ, ತಾನು ಅದನ್ನು ಮತ್ತೆ ಪ್ಯಾಕ್ ಮಾಡಿ ಸೀಲ್ ಮಾಡಿ ಚಾಸಾ-29 ಗೆ ಹಿಂತಿರುಗಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **66 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಾನು ಶಸ್ತ್ರಾಸ್ತ್ರ ಪರೀಕ್ಷಾ ವರದಿಯನ್ನು ನಿಪಿ -24 ಎಂದು ಗುರುತಿಸಲಾಗಿದೆ ಮತ್ತು ತನ್ನ 2 ಸಹಿಗಳನ್ನು ಒಟ್ಟಿಗೆ ನಿಪಿ -24(ಎ) ಎಂದು ಗುರುತಿಸಲಾಗಿದೆ, ತಾನು ತಮ್ಮ ಆಸ್ಪತ್ರೆಯ ಮುದ್ರೆಯನ್ನು ನಿಪಿ -25 ಎಂದು ಗುರುತಿಸಲಾಗಿದೆ ಮತ್ತು ಮುದ್ರೆಯ ಮುದ್ರೆಯನ್ನು ನಿಪಿ -25(ಎ) ಎಂದು ಗುರುತಿಸಲಾಗಿದೆ ಮತ್ತು ತನ್ನ ಸಹಿಯನ್ನು ನಿಪಿ -25(ಬಿ) ಎಂದು ಗುರುತಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **67 –** ಪ್ರಾಸಾ-**16** ನಾಗೇಂದ್ರ ಪಟ್ಟಣಶೆಟ್ಟಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚಾಸಾ-29 ರವರು ಈ ಪ್ರಕರಣದ ಗುನ್ನಾ ಜಾಗದ ನಕಾಶೆಯನ್ನು ತೆಗೆದು ಪೂರೈಸುವಂತೆ ಕೋರಿಕೆ ಪತ್ರವನ್ನು ತಮ್ಮ ಕಚೇರಿಗೆ ಸಲ್ಲಿಸಿದ್ದರು, ಈ ಪತ್ರವನ್ನು ತಮ್ಮ ಮೇಲಾಧಿಕಾರಿಗಳು ತನಗೆ ಕೊಟ್ಟಿರುತ್ತಾರೆ, ದಿನಾಂಕಃ 25.04.2022 ರಂದು ಗುನ್ನಾ ಸ್ಥಳಕ್ಕೆ ಹೋಗಿದ್ದು, ಪ್ರಾಸಾ-14 ರವರು ಗುನ್ನಾ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪರಿಶೀಲನೆ ಮಾಡಿ ಗುನ್ನಾ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ ಮತ್ತು ತಮ್ಮ ಮೇಲಾಧಿಕಾರಿಗಳ ಮೂಲಕ ಸದರಿ ಗುನ್ನಾ ನಕಾಶೆಯನ್ನು ಚಾಸಾ-29 ರವರಿಗೆ

ಕಳಿಸಿಕೊಟ್ಟಿರುತ್ತೇನೆ, ಆ ಸಮಯದಲ್ಲಿ ನಾನೇ ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಕೆಲಸ ಮಾಡುತ್ತಿದ್ದೆನು, ತಾನು ತಯಾರಿಸಿದ ನಕಾಶೆಯನ್ನು ನಿಪಿ-26 ಎಂದು, ತನ್ನ ಸಹಿಯನ್ನು ನಿಪಿ-26(ಎ) ಎಂದು ಹಾಗೂ ನಿಪಿ-26 ರ ಕವರಿಂಗ್ ಲೆಟರನ್ನು ನಿಪಿ-27 ಎಂದು, ತನ್ನ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **68 –** ಫ್ರಾಸಾ-**17** ಡಿ ಟೋಪಣ್ಣ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚಾಸಾ-29 ರವರು ದಿಃ 21.04.2022 ರಂದು, ದಿಃ 04.03.2022 ರಂದು ಸಂಜೆ 06,00 ರಿಂದ ರಾತ್ರಿ 10,00 ರ ವರೆಗೆ ಅತ್ತಿಕಟ್ಟಿ ತಾಂಡಾದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿಯನ್ನು ಪೂರೈಸುವಂತೆ ತಮ್ಮ ಕಚೇರಿ ಪತ್ರವನ್ನು ಬರೆದಿದ್ದರು, ಆ ಪ್ರಕಾರ, ತಾನು 110/33/11 ಕೆವಿ ಡಂಬಳ ಉಪ ಕೇಂದ್ರದಿಂದ ಬರುವ ಎಫ್-7 ಎನ್,ಜೆ,ವೈ, ಡೋಣಿ ಫೀಡರನಲ್ಲಿ ನಿರ್ವಹಿಸುತ್ತಿರುವ ಲಾಗ್ ಶೀಟನ್ನು ಪರಿಶೀಲನೆ ಮಾಡಿ, ದಿಃ 04.03.2022 ರಂದು ಸಂಜೆ 06,00 ರಿಂದ ರಾತ್ರಿ 10,00 ರ ವರೆಗೆ ಅತ್ತಿಕಟ್ಟಿ ತಾಂಡಾದಲ್ಲಿ ವಿದ್ಯುತ್ ಸರಬರಾಜು ಇತ್ತು ಎಂದು ಮಾಹಿತಿಯನ್ನು ಪತ್ರದ ಮೂಲಕ ಪೂರೈಸಿರುತ್ತೇನೆ, ಸದರಿ ಪತ್ರವನ್ನು ನಿಪಿ-28 ಎಂದು, ತನ್ನ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **69 –** ಫ್ರಾಸಾ-**18** ಸುನೀಲ ಸವದಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿಃ 04.03.2022 ರಂದು, ರಾತ್ರಿ 10,00 ಗಂಟೆಗೆ ಅತ್ತಿಕಟ್ಟಿ ಗ್ರಾಮದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕು ಚುಚ್ಚಿ ಕೊಲೆ ಮಾಡಲಾಗಿದೆ ಎಂದು ಮಾಹಿತಿ ಬಂದಿದ್ದು ಮತ್ತು ಸಧ್ಯಕ್ಕೆ ಶವವು ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಇರುವುದಾಗಿ ಮಾಹಿತಿ ಬಂದ ಮೇರೆಗೆ ತಾನು ತಕ್ಷಣ ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ ಮೃತನ ಸಂಬಂಧಿಕರು ಯಾರೂ ಇಲ್ಲದ ಕಾರಣ ಅತ್ತಿಕಟ್ಟಿ ಗ್ರಾಮಕ್ಕೆ ಹೋಗಿ, ಬೆಳಗಿನ ಜಾವ 01,30 (05.03.2022) ಗಂಟೆಗೆ ಫ್ರಾಸಾ-1 ರವರಿಂದ ದಸ್ತೂರ ದೂರನ್ನು ಪಡೆದುಕೊಂಡಿರುತ್ತೇನೆ ಮತ್ತು ಮುಂಡರಗಿ ಠಾಣೆಗೆ ವಾಪಸ್ ಬಂದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **70 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಸದರಿ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ನಂ, 47/2022 ಕಲಂ 302 ಐಪಿಸಿ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಮೂಲ ದೂರನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತೇನೆ, ದೂರನ್ನು ನಿಪಿ-1 ಎಂದು, ತನ್ನ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-1(ಬಿ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-29 ಎಂದು, ತನ್ನ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು, ನಂತರ ಅದೇ ದಿನ, ಪಿಸಿ 480 ರವರಿಗೆ ಘಟನಾ ಸ್ಥಳದ ಕಾವಲು ಕುರಿತು ನೇಮಿಸಿರುತ್ತೇನೆ ಮತ್ತು ಫ್ರಾಸಾ-12 ಮತ್ತು ಹೆಚ್,ಸಿ 961 ರವರನ್ನು ಆರೋಪಿಯನ್ನು ಪತ್ತೆ ಮಾಡಿಕೊಂಡು ಬರಲು ನೇಮಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **71 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅದೇ ದಿನ, ಗದಗ ಜಿಲ್ಲಾ ಆಸ್ಪತ್ರೆಗೆ ಬೇಟಿ ಕೊಟ್ಟಿದ್ದು, ಅಲ್ಲಿ ವಾರಸುದಾರರು ಬೇಗನೇ ಬರದ ಕಾರಣ ಪುನಃ ಅತ್ತಿಕಟ್ಟಿ ಗ್ರಾಮಕ್ಕೆ ಬೇಟಿ ಕೊಟ್ಟು, ಅಲ್ಲಿ ಫ್ರಾಸಾ-8 ರವರು ತೋರಿಸಿದ ಸ್ಥಳದಲ್ಲಿ ಫ್ರಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ 11,15 ರಿಂದ 12,15 ರ ವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-4 ರಂತೆ ಮಾಡಿರುತ್ತೇನೆ, ತನ್ನ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು, ಘಟನಾ ಸ್ಥಳದಿಂದ ಒಣಗಿದ ರಕ್ತವನ್ನು ವಶಪಡಿಸಿಕೊಂಡಿರುತ್ತೇನೆ, ಸದರಿ ರಕ್ತವನ್ನು ನೋಡಿದರೆ ಗುರುತಿಸುತ್ತೇನೆ, ಈಗ ಅದನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ. 5 ಎಂದು ಗುರುತಿಸಲಾಗಿರುತ್ತದೆ, ನಿಪಿ-4 ರ ಕಾಲಕ್ಕೆ ನಿಪಿ-2 ಮತ್ತು 3 ರಂತೆ ಫೋಟೋಗಳನ್ನು ತೆಗೆಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **72 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ-4 ರ ಕಾಲಕ್ಕೆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಲಾಗಿರುತ್ತದೆ, ಸದರಿ ಕಚ್ಚಾ ನಕಾಶೆಯನ್ನು ನಿಪಿ-30 ಎಂದು, ತನ್ನ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು, ನಂತರ ಅದೇ ದಿನ ಫ್ರಾಸಾ-8 ರವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ, ನಂತರ ಮೃತನ ಶವದ ಪಂಚನಾಮೆಯನ್ನು ನಿಪಿ-6 ರಂತೆ ಮದ್ಯಾಹ್ನ 01,00 ರಿಂದ 02,00 ರ ವರೆಗೆ ಫ್ರಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ಗದಗ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮಾಡಿರುತ್ತೇನೆ, ಶವವನ್ನು ಫ್ರಾಸಾ-7 ರವರು ಗುರುತಿಸಿರುತ್ತಾರೆ, ನಿಪಿ-6 ರ ಮೇಲಿರುವ ತನ್ನ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-6(ಬಿ) ಎಂದು ಗುರುತಿಸಲಾಯಿತು, ನಿಪಿ-6 ರ ಕಾಲಕ್ಕೆ ನಿಪಿ-7 ಮತ್ತು 8 ರಂತೆ ಫೋಟೋಗಳನ್ನು ತೆಗೆಸಲಾಗಿರುತ್ತದೆ, ನಂತರ ಅದೇ ದಿನ, ಫ್ರಾಸಾ-7 ರವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ, ನಂತರ ಅದೇ ದಿನ ಸಿಬ್ಬಂದಿಯವರು ಆರೋಪಿಯನ್ನು ಹಿಡಿದುಕೊಂಡು ಬಂದು ತನ್ನ ಮುಂದೆ ಹಾಜರಪಡಿಸಿರುತ್ತಾರೆ, ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಆರೋಪಿಯು ಈ ದಿನ ನ್ಯಾಯಾಲಯದ ವಿ,ಸಿ,ಯಲ್ಲಿ ಕಾಣಿಸುವ ವ್ಯಕ್ತಿಯಾಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **73 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯನ್ನು ವಿಚಾರಿಸಲಾಗಿ ಆರೋಪಿಯು ಕೃತ್ಯ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದು, ಆತನನ್ನು ದಸ್ತಗಿರಿ ಮಾಡಿರುತ್ತೇನೆ ಮತ್ತು ಆತನ ಸ್ವ-ಖುಷಿ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ, ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನಿಪಿ-31 ಎಂದು, ತನ್ನ ಸಹಿಯನ್ನು ನಿಪಿ-31(ಎ) ಎಂದು ಹಾಗೂ ಆರೋಪಿಯ ಸಹಿಯನ್ನು ನಿಪಿ-31(ಬಿ) ಎಂದು ಮತ್ತು ಸಂಬಂಧಿಸಿದ ನಮೂದನ್ನು ನಿಪಿ-31(ಸಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **74 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯ ಸ್ವ-ಇಚ್ಛಾ ಹೇಳಿಕೆಯ ಪ್ರಕಾರ, ಆರೋಪಿಯು ಹೇಳಿದಂತೆ ತಾನು, ಫ್ರಾಸಾ-4 ಮತ್ತು ಚಾಸಾ-7

ಮತ್ತು ಸಿಬ್ಬಂದಿ ಹಾಗೂ ಆರೋಪಿ ಸೇರಿ ಬರದೂರ ಗ್ರಾಮಕ್ಕೆ ಹೋಗಿದ್ದು, ಅಲ್ಲಿ ಆರೋಪಿ ತೋರಿಸಿ, ಕೃತ್ಯಕ್ಕೆ ಉಪಯೋಗಿಸಿದ ಒಂದು ಚಾಕುವನ್ನು ಹಾಗೂ ಆರೋಪಿಯು ತನ್ನ ಸಂರಕ್ಷಣೆಗಾಗಿ ಇಟ್ಟುಕೊಂಡಿದ್ದ ಒಂದು ಮಚ್ಚನ್ನು ಹಾಜರಪಡಿಸಿರುತ್ತಾನೆ, ಸದರಿ ಚಾಕು ಹಾಗೂ ಮಚ್ಚನ್ನು ಪ್ರಾಸಾ-4 ಮತ್ತು ಚಾಸಾ-7 ರವರ ಸಮಕ್ಷಮ ಸಂಜೆ 04,15 ರಿಂದ 05,30 ರ ವರೆಗೆ ನಿಪಿ-9 ರಂತೆ ಪಂಚನಾಮೆ ಮಾಡಿ, ಅಮಾನತ್ತುಪಡಿಸಿಕೊಂಡಿರುತ್ತೇನೆ, ಸದರಿ ಚಾಕು ಹಾಗೂ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ, ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.6 ಮತ್ತು 7 ಎಂದು ಗುರುತಿಸಲಾಗಿರುತ್ತದೆ, ನಿಪಿ-9 ರ ಮೇಲಿರುವ ತನ್ನ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-9(ಬಿ) ಎಂದು ಗುರುತಿಸಲಾಯಿತು, ನಿಪಿ-9 ಕ್ಕೆ ಆರೋಪಿ ಕೂಡಾ ಸಹಿ ಮಾಡಿದ್ದು, ಆತನ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು, ನಿಪಿ-9 ರ ಕಾಲಕ್ಕೆ ನಿಪಿ-12 ರಂತೆ ಫೋಟೋವನ್ನು ತೆಗೆಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **75 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಅದೇ ದಿನ, ವಾಪಸ್ ಠಾಣೆಗೆ ಬಂದು, ಪಂಚರಾದ ಪ್ರಾಸಾ-4 ಮತ್ತು ಚಾಸಾ-7 ರವರ ಸಮಕ್ಷಮ ಆರೋಪಿಯು ಧರಿಸಿದ್ದ ರಕ್ತ ಹತ್ತಿದ ಶರ್ಟನ್ನು ನಿಪಿ-10 ರಂತೆ ಪಂಚನಾಮೆ ಮಾಡಿ ಆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ, ಈಗ ಆರೋಪಿಯ ಶರ್ಟನ್ನು ಮು.ಮಾ.8 ಎಂದು, ನಿಪಿ-10 ರ ಮೇಲಿರುವ ತನ್ನ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು, ನಿಪಿ-10 ರ ಕಾಲಕ್ಕೆ ನಿಪಿ-13 ಮತ್ತು 14 ರಂತೆ ಫೋಟೋಗಳನ್ನು ತೆಗೆಸಲಾಗಿರುತ್ತದೆ, ನಂತರ ಅದೇ ದಿನ, ಪಿಸಿ 520 ರವರು ಗದಗ ಜಿಲ್ಲಾ ಆಸ್ಪತ್ರೆಯಿಂದ ಮೃತನ ಮೈಮೇಲಿನ ಮೂರು ಬಟ್ಟೆಗಳನ್ನು ತಂದು ಹಾಜರಪಡಿಸಿದ್ದು, ಅವುಗಳನ್ನು ಪಂಚರಾದ ಪ್ರಾಸಾ-4 ಮತ್ತು ಚಾಸಾ-7 ರವರ ಸಮಕ್ಷಮ ರಾತ್ರಿ 09,45 ರಿಂದ 10,30 ರವರೆಗೆ ನಿಪಿ-11 ರಂತೆ ಪಂಚನಾಮೆ ಮಾಡಿ, ಆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ, ಈಗ ಮೃತನ ಬಟ್ಟೆಗಳನ್ನು ಮು.ಮಾ.2 ರಿಂದ 4 ಎಂದು ಗುರುತಿಸಲಾಗಿರುತ್ತದೆ, ನಿಪಿ-11 ರ ಮೇಲಿರುವ ತನ್ನ ಸಹಿಯನ್ನು ನಿಪಿ-11(ಸಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **76 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಅದೇ ದಿನ, ಚಾಸಾ-18, ಪ್ರಾಸಾ-9 ಮತ್ತು ಪ್ರಾಸಾ-12 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ, ದಿಃ 06.03.2022 ರಂದು, ಪ್ರಾಸಾ-10 ರವರು ಘಟನೆ ಕಾಲಕ್ಕೆ ಆರೋಪಿಯ ಸೊಂಟದಲ್ಲಿದ್ದ ಒಂದು ಚೂರಿಯನ್ನು ಕಸಿದುಕೊಂಡಿದ್ದು ಅದನ್ನು ಅವರು ತಂದು ಠಾಣೆಯಲ್ಲಿ ಹಾಜರಪಡಿಸಿದ್ದು, ಅದನ್ನು ಪಂಚರಾದ ಚಾಸಾ-8 ಮತ್ತು ಪ್ರಾಸಾ-5 ರವರ ಸಮಕ್ಷಮ ಬೆಳಿಗ್ಗೆ 08,30 ರಿಂದ 09,15 ರ ರವರೆಗೆ ನಿಪಿ-16 ರಂತೆ ಪಂಚನಾಮೆ ಮಾಡಿ, ಆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ, ಸದರಿ ಚೂರಿಯನ್ನು ನೋಡಿದರೆ ಗುರುತಿಸುತ್ತೇನೆ, ಈಗ ಸದರಿ ಚೂರಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ, ನಿಪಿ-16 ರ ಮೇಲಿರುವ ತನ್ನ ಸಹಿಯನ್ನು ನಿಪಿ-16(ಸಿ) ಎಂದು ಗುರುತಿಸಲಾಯಿತು, ನಿಪಿ-16 ರ

ಕಾಲಕ್ಕೆ ನಿಪಿ-17 ರಂತೆ ಫೋಟೋವನ್ನು ತೆಗೆಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **77 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಅದೇ ದಿನ, ಚಾಸಾ-11, ಫ್ರಾಸಾ-11, 10, ಚಾಸಾ-12, ಫ್ರಾಸಾ-6 ಮತ್ತು 5 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ, ನಂತರ ಅದೇ ದಿನ, ಫ್ರಾಸಾ-1 ರವರ ಮರು ಹೇಳಿಕೆಯನ್ನು ಕೂಡಾ ಪಡೆದುಕೊಂಡಿರುತ್ತೇನೆ, ದಿಃ 08.03.2022 ರಂದು, ಘಟನಾ ಸ್ಥಳದ ನಕಾಶೆಯನ್ನು ತೆಗೆದು ಪೂರೈಸುವಂತೆ ಪಿಡಬ್ಲುಡಿ ರವರಿಗೆ ಮತ್ತು ಘಟನಾ ಸ್ಥಳದ ಉತಾರ ಪೂರೈಸುವಂತೆ ಪಿಡಿಓ ರವರಿಗೆ ಪತ್ರಗಳನ್ನು ಬರೆದಿರುತ್ತೇನೆ, ದಿಃ 09.03.2022 ರಂದು, ಮೃತನ ಪಿ,ಎಂ, ವರದಿಯನ್ನು ಸಿಬ್ಬಂದಿಯವರು ತಂದು ಹಾಜರಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ-23 ಎಂದು ಗುರುತಿಸಲಾಗಿದ್ದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು, ದಿಃ 10.03.2022 ರಂದು, ಘಟನಾ ಸ್ಥಳದ ಉತಾರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ ಉತಾರ ನಿಪಿ-32 ಎಂದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **78 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 11.03.2022 ರಂದು, ಜಪ್ತ ಮಾಡಿದ ವಸ್ತುಗಳನ್ನು ಆರ್,ಎಫ್,ಎಸ್,ಎಲ್, ಬೆಳಗಾವಿ ಗೆ ಪಿಸಿ 401 ರವರ ಮೂಲಕ ಪರೀಕ್ಷೆಗಾಗಿ ಕಳಿಸಿರುತ್ತೇನೆ, ದಿಃ 14.03.2022 ರಂದು, ಚಾಸಾ-11, ಫ್ರಾಸಾ-11, 10, ಚಾಸಾ-12 ರವರ ಕಲಂ 164 ಸಿ,ಆರ್,ಪಿ,ಸಿ, ಅಡಿಯ ಹೇಳಿಕೆಯನ್ನು ಪಡೆಯಲು ನ್ಯಾಯಾಧೀಶರಿಗೆ ವಿನಂತಿ ಪತ್ರವನ್ನು ಬರೆದಿರುತ್ತೇನೆ, ದಿಃ 17.03.2022 ರಂದು, ಚಾಸಾ-11, ಫ್ರಾಸಾ-11, 10, ಚಾಸಾ-12 ರವರ ಕಲಂ 164 ಸಿ,ಆರ್,ಪಿ,ಸಿ, ಅಡಿಯ ಹೇಳಿಕೆಯನ್ನು ದಾಖಲು ಮಾಡಿಸಿ, ನಂತರ ಅವುಗಳನ್ನು ಪಡೆಯಲಾಗಿರುತ್ತದೆ, ಸದರಿ ಚಾಸಾ-11, ಚಾಸಾ-12 ರವರ ಕಲಂ 164 ಸಿ,ಆರ್,ಪಿ,ಸಿ, ಅಡಿಯ ಹೇಳಿಕೆಗಳನ್ನು ನಿಪಿ-33 ಮತ್ತು 34 ಎಂದು ಗುರುತಿಸಲಾಯಿತು, ಅವುಗಳ ಮೇಲಿರುವ ತನ್ನ ಸ್ವೀಕೃತಿ ಸಹಿಗಳನ್ನು ನಿಪಿ-33(ಎ) ಮತ್ತು 34(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **79 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಸದರಿ ಫ್ರಾಸಾ-10 ರವರ ಕಲಂ 164 ಸಿ,ಆರ್,ಪಿ,ಸಿ, ಅಡಿಯ ಹೇಳಿಕೆಯನ್ನುನಿಪಿ-19 ಎಂದು, ನಿಪಿ-19 ರ ಮೇಲಿರುವ ತನ್ನ ಸ್ವೀಕೃತಿ ಸಹಿಯನ್ನು ನಿಪಿ-19(ಬಿ) ಎಂದು, ಫ್ರಾಸಾ-11 ರವರ ಕಲಂ 164 ಸಿ,ಆರ್,ಪಿ,ಸಿ, ಅಡಿಯ ಹೇಳಿಕೆಯನ್ನುನಿಪಿ-35 ಎಂದು ಮತ್ತು ತನ್ನ ಸ್ವೀಕೃತಿ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು, ನಂತರ ಅದೇ ದಿನ, ಪಿಸಿ 401 ರವರು ಆರ್,ಎಫ್,ಎಸ್,ಎಲ್, ಬೆಳಗಾವಿ ಇವರಿಂದ ಪಡೆದ ಸ್ವೀಕೃತಿಯನ್ನು ತಂದು ಹಾಜರಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ

ಸ್ವೀಕೃತಿಯನ್ನು ನಿಪಿ-36 ಎಂದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು, ನಂತರ ಪಿಸಿ 401 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **80 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 18.04.2022 ರಂದು, ಘಟನೆ ನಡೆದ ಸಮಯದಲ್ಲಿ ವಿದ್ಯುತ ಸರಬರಾಜು ಇರುವ ಬಗ್ಗೆ ಮಾಹಿತಿ ಪೂರೈಸುವಂತೆ ಹೆಸ್ಕಾಂ ಅಧಿಕಾರಿಗಳಿಗೆ ಪತ್ರವನ್ನು ಬರೆದಿರುತ್ತೇನೆ, ದಿಃ 05.05.2022 ರಂದು, ಹೆಸ್ಕಾಂ ಅಧಿಕಾರಿಗಳು ಘಟನೆ ನಡೆದ ಸಮಯದಲ್ಲಿ ವಿದ್ಯುತ ಸರಬರಾಜು ಇರುವ ಬಗ್ಗೆ ಮಾಹಿತಿ ಪೂರೈಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ ಮಾಹಿತಿಯನ್ನು ನಿಪಿ-28 ಎಂದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-28(ಬಿ) ಎಂದು ಗುರುತಿಸಲಾಯಿತು, ನಂತರ ಅದೇ ದಿನ ಪಿಡಬ್ಲುಡಿಯವರ ಕೊಟ್ಟ ಗುನ್ನಾ ಸ್ಥಳದ ನಕಾಶೆಯನ್ನು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ ನಕಾಶೆಯನ್ನು ನಿಪಿ-26 ಎಂದು ಹಾಗೂ ನಿಪಿ-26 ರ ಕವರಿಂಗ ಲೆಟರನ್ನು ನಿಪಿ-27 ಎಂದು, ನಿಪಿ-27 ರ ತನ್ನ ಸ್ವೀಕೃತಿ ಸಹಿಯನ್ನು ನಿಪಿ-27(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **81 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರ್,ಎಫ್,ಎಸ್,ಎಲ್, ಬೆಳಗಾವಿ ಇವರಿಂದ ಬರುವ ಪ್ರಮಾಣ ಪತ್ರವನ್ನು ಬಾಕಿ ಇಟ್ಟು, ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿರುತ್ತೇನೆ, ದಿಃ07.07.2022 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ, ದಿಃ 08.07.2022 ರಂದು ಸದರಿ FSL ವರದಿಯನ್ನು ಮತ್ತು ಮು.ಮಾ.6 ನ್ನು ಜಿಮ್ಸ ವೈದ್ಯರಿಗೆ ಕಳಿಸಿ, ಅಂತಿಮ ಅಭಿಪ್ರಾಯ ಕೊಡುವಂತೆ ಕೋರಿಕೆ ಪತ್ರವನ್ನು ಬರೆದಿರುತ್ತೇನೆ, ದಿಃ 14.07.2022 ರಂದು ಸದರಿ ವೈದ್ಯರು ತಮ್ಮ ಅಂತಿಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ, ಸದರಿ ಅಂತಿಮ ಅಭಿಪ್ರಾಯವನ್ನು ನಿಪಿ-24 ಎಂದು ಗುರುತಿಸಲಾಗಿದ್ದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **82 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 15.07.2022 ರಂದು FSL ವರದಿಯನ್ನು ಮತ್ತು ನಿಪಿ-24 ನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತೇನೆ, FSL ವರದಿಯನ್ನು ನಿಪಿ-37 ಎಂದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-37(ಎ) ಎಂದು ಹಾಗೂ ಈ ಪ್ರಕರಣದಲ್ಲಿ ಹಾಜರಪಡಿಸಿದ ಸಿ,ಡಿ, ಮತ್ತು ಪ್ರಮಾಣ ಪತ್ರವನ್ನು ನಿಪಿ-21 ಮತ್ತು ನಿಪಿ-22 ಎಂದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **83 –** ಫ್ರಾಸಾ-**19** ಮಲ್ಲಪ್ಪ ಗೊಳಗೊಳಕಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ತನ್ನ ಮೇಲಾಧಿಕಾರಿಗಳಾದ ಫ್ರಾಸಾ-18 ರವರ ಆದೇಶದಂತೆ ಈ ಪ್ರಕರಣದಲ್ಲಿ ತನಿಖಾ ಸಹಾಯಕನಾಗಿ ಕೆಲಸ ಮಾಡಿರುತ್ತೇನೆ, ಸಾಕ್ಷಿದಾರರ

ಹೇಳಿಕೆಗಳನ್ನು ಗಣಕೀಕರಣ ಮಾಡಿರುತ್ತೇನೆ ಹಾಗೂ ಪಂಚನಾಮೆಯ ಕಾಲಕ್ಕೆ ಪಂಚರು ಹೇಳಿದಂತೆ ಪಂಚನಾಮೆಯನ್ನು ಬರೆದಿರುತ್ತೇನೆ, ಬಟ್ಟೆ ಜಪ್ತಿ ಪಂಚನಾಮೆಯನ್ನು ಮತ್ತು ಚಾಕು ಜಪ್ತಿ ಪಂಚನಾಮೆಯನ್ನು ಗಣಕೀಕರಣ ಮಾಡಿರುತ್ತೇನೆ, ತಾನು ಅವುಗಳಿಗೆ ದಸ್ತೂರ ಸಹಿ ಮಾಡಿರುತ್ತೇನೆ ಹಾಗೂ ಈ ಬಗ್ಗೆ ತಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **84 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಾನು ನಿಪಿ-4 ರ ಮೇಲಿರುವ ದಸ್ತೂರ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು, ಪಿ,ಡಬ್ಲ್ಯೂ,ಡಿ ಇಂಜಿನಿಯರವರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ, ತಾನು ನಿಪಿ-11 ರ ಮೇಲಿರುವ ಗಣಕೀಕರಣ ಮಾಡಿದವರ ಸಹಿಯನ್ನು ನಿಪಿ-11(ಡಿ) ಎಂದು ಗುರುತಿಸಲಾಯಿತು, ತಾನು ನಿಪಿ-9 ರ ಮೇಲಿರುವ ಗಣಕೀಕರಣ ಮಾಡಿದವರ ಸಹಿಯನ್ನು ನಿಪಿ-9(ಡಿ) ಎಂದು ಗುರುತಿಸಲಾಯಿತು, ತಾನು ನಿಪಿ-16 ರ ಮೇಲಿರುವ ಗಣಕೀಕರಣ ಮಾಡಿದವರ ಸಹಿಯನ್ನು ನಿಪಿ-16(ಡಿ) ಎಂದು ಗುರುತಿಸಲಾಯಿತು, ತಾನು ನಿಪಿ-10 ರ ಮೇಲಿರುವ ಗಣಕೀಕರಣ ಮಾಡಿದವರ ಸಹಿಯನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **85 –** ಫ್ರಾಸಾ**-20** ಡಾಃ ಬಸವರಾಜ ಕೋಟಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 17.03.2022 ರಂದು ಈ ಪ್ರಕರಣದಲ್ಲಿ ಜಪ್ತಾದ ಸುಸ್ಥಿತಿಯಲ್ಲಿದ್ದ ಒಟ್ಟು 7 ಸೀಲಾದ ವಸ್ತುಗಳನ್ನು ಚಾಸಾ-22 ರವರು ತಂದು ತಮ್ಮ ಕಚೇರಿಯಲ್ಲಿ ಕೊಟ್ಟಿದ್ದು, ಸದರಿ ವಸ್ತುಗಳನ್ನು ದಿನಾಂಕಃ 23.05.2022 ರಂದು ತಮ್ಮ ಮೇಲಾಧಿಕಾರಿಗಳ ಆದೇಶದಂತೆ ತಾನು ಪರೀಕ್ಷೆಗಾಗಿ ಪಡೆದುಕೊಂಡಿರುತ್ತೇನೆ, ಸದರಿ ವಸ್ತುಗಳು ಸುಸ್ಥಿತಿಯಲ್ಲಿ ಇದ್ದವು ಮತ್ತು ಸೀಲಾಗಿದ್ದವು ಮತ್ತು ಅವುಗಳು ಮಾದರಿ ಸೀಲಿನೊಂದಿಗೆ ಹೋಲಿಕೆಯಾಗಿದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **86 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಅದೇ ದಿನದಂದು ತಾನು ಅವುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದರಿ ವಸ್ತುಗಳು- 1) ರಕ್ತದ ಕಲೆಗಳು, 2) ಒಂದು ಬನಿಯನ್, 3) ಒಂದು ಒಳ ಉಡುಪು, 4) ಒಂದು ಲುಂಗಿ, 5) ಒಂದು ಚಾಕು, 6) ಒಂದು ಮಚ್ಚು ಮತ್ತು 7) ಒಂದು ಶರ್ಟ್ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **87 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಾನು ವರದಿಯನ್ನು ನೀಡಿದ್ದು ಅದು- 1) ಲೇಖನ ಸಂಖ್ಯೆ 1, 2, 3, 4, 5 ಮತ್ತು 7 ರಲ್ಲಿ ರಕ್ತದ ಕಲೆ ಪತ್ತೆಯಾಗಿದೆ, 2) ಲೇಖನ ಸಂಖ್ಯೆ 6 ರಲ್ಲಿ ರಕ್ತದ ಕಲೆ ಪತ್ತೆಯಾಗಿಲ್ಲ, 3) ಲೇಖನ ಸಂಖ್ಯೆ 1, 2, 3, 4 5 ಮತ್ತು 7 ಮಾನವ ರಕ್ತದಿಂದ ಕೂಡಿದೆ, 4) ಲೇಖನ ಸಂಖ್ಯೆ 1, 2, 3, 4 5 ಮತ್ತು 7

"B" ಗುಂಪಿನ ರಕ್ತದಿಂದ ಕೂಡಿದ್ದವು ಎಂದು, ಸದರಿ ತಾನು ಕೊಟ್ಟ ವರದಿಯನ್ನು ನಿಪಿ-37 ಎಂದು ಮತ್ತು ನಿಪಿ-37 ರ ಮೇಲೆ ತನ್ನ ಮೂರು ಸಹಿಗಳು ಇದ್ದು, ಕೊನೆಯ ಪುಟದಲ್ಲಿರುವ ತನ್ನ ಸಹಿಯನ್ನು ನಿಪಿ-37(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **88 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಪರೀಕ್ಷೆ ಮಾಡಿದ ನಂತರ ಸದರಿ ವಸ್ತುಗಳನ್ನು ಪುನಃ ಪ್ಯಾಕ ಮಾಡಿ, ಸೀಲ್ ಮಾಡಿ, ಮಾದರಿ ಸೀಲಿನೊಂದಿಗೆ ಸಂಬಂಧಿಸಿದ ಪೋಲೀಸರಿಗೆ ಮರಳಿ ಕಳಿಸಿಕೊಡಲಾಗಿರುತ್ತದೆ, ಮಾದರಿ ಸೀಲನ ಪತ್ರವನ್ನು ನಿಪಿ-38 ಎಂದು, ತನ್ನ ಸಹಿಯನ್ನು ನಿಪಿ-38(ಎ) ಎಂದು ಗುರುತಿಸಲಾಯಿತು, ತಾನು ಪರೀಕ್ಷೆ ಮಾಡಿದ ವಸ್ತುಗಳನ್ನು ಮು.ಮಾ.5, 2, 3, 4, 6, 7 ಮತ್ತು 8 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **89 –** ಈ ಕೇಸಿನ ಬಗ್ಗೆ ಏನಾದರೂ ಹೇಳುವುದು ಇದೆಯೆ?

ಉತ್ತರಃ ಇಲ್ಲ

ಪ್ರಶ್ನೆ **90–** ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೆ?

ಉತ್ತರಃ ಇದೆ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಅರ್ಥ ಮಾಡಿಸಿ ಮತ್ತು ಆರೋಪಿಯ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ನನ್ನಿಂದ ರೆಕಾರ್ಡ ಮಾಡಲಾಯಿತು, ದಿಃ **09.03.2026.**)

NAGAVENI Digitally signed by NAGAVENI
Date: 2026.03.10 14:51:20 +0000

**(ನಾಗವೇಣಿ)**
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು**,**
ಗದಗ**,**

ಆರೋಪಿಯ ಸಹಿಃ